ಸಂಪುಟ 01 । ಸಂಚಿಕೆ 136 । ಬುಧವಾರ 22 ಜುಲೈ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ವಿಶ್ವ ಮೆದುಳಿನ ದಿನ (World Brain Day) ಮೆದುಳಿನ ಆರೋಗ್ಯದ ಮಹತ್ವದ ಬಗ್ಗೆ ಅರಿವು ಮೂಡಿಸಲು ಪ್ರತಿವರ್ಷ ಜುಲೈ 22 ರಂದು ಆಚರಿಸಲಾಗುತ್ತದೆ.

2)ಮಾವು ದಿನ (Mango Day) ಕೆಲವು ಪ್ರದೇಶಗಳಲ್ಲಿ ಮಾವಿನ ಹಣ್ಣಿನ ಮಹತ್ವವನ್ನು ಸಾರುವ ಆಚರಣೆ.

3)ರಾಷ್ಟ್ರೀಯ ಧ್ವಜ ಅಂಗೀಕಾರ ದಿನ (National Flag Adoption Day) ರಾಷ್ಟ್ರೀಯ ಧ್ವಜ ಅಂಗೀಕಾರ ದಿನವನ್ನು ಭಾರತದಲ್ಲಿ ಪ್ರತಿವರ್ಷ ಜುಲೈ 22ರಂದು ಆಚರಿಸಲಾಗುತ್ತದೆ. 1947ರ ಇದೇ ದಿನ, ಭಾರತದ ಸಂವಿಧಾನ ಸಭೆ ಸ್ವಾತಂತ್ರ್ಯಕ್ಕೆ ಕೆಲವೇ ದಿನಗಳ ಮುನ್ನ ತ್ರಿವರ್ಣ ಧ್ವಜವನ್ನು ಭಾರತದ ಅಧಿಕೃತ ರಾಷ್ಟ್ರೀಯ ಧ್ವಜವಾಗಿ ಅಂಗೀಕರಿಸಿತು.

## ಸುಭಾಷಿತ

ಮಡದಿ ಬಂದ ಮೇಲೆ
ಒಡಹುಟ್ಟಿದವರು ಭಾರ, ಆಸ್ತಿ
ಭಾಗವಾದ ಮೇಲೆ ಹೆತ್ತವರು ಭಾರ,
ಗಂಡ ತೊರೆದ ಹೆಣ್ಣು ತವರಿಗೆ ಭಾರ,
ಮೋಹ ಕಳೆದ ಮೇಲೆ ಸಂಸಾರ
ಭಾರ, ಅವಶ್ಯಕತೆ ಮುಗಿದ ಮೇಲೆ
ಎಲ್ಲವೂ ಭಾರ

~ಸಿದ್ದೇಶ್ವರ ಸ್ವಾಮೀಜಿ

ನೈಜ್ಯ ದೇಸೆ ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಸಂಪುಟ ವಿಸ್ತರಣೆ ದೆಹಲಿಯಲ್ಲಿ ಸಭೆ

**ಕಲ್ಯಾಣ ಜ್ಯೋತಿ ನ್ಯೂಸ್**

**ಬೆಂಗಳೂರು: ರಾಜ್ಯ ಸಚಿವ ಸಂಪುಟ ವಿಸ್ತರಣೆ ಸನ್ನಿಹಿತವಾಗಿದ್ದು, 3-4 ದಿನಗಳಲ್ಲಿ ಸಂಪುಟ ವಿಸ್ತರಣೆಯಾಗುವುದು ಬಹುತೇಕ ನಿಶ್ಚಿತ.**

ಸಚಿವ ಸಂಪುಟ ವಿಸ್ತರಣೆಗೆ ಮುಹೂರ್ತ ನಿಗದಿ ಮಾಡಲು ಹಾಗೂ ಸಚಿವರ ಪಟ್ಟಿಯನ್ನು ಅಂತಿಮಗೊಳಿಸಲು ಕಾಂಗ್ರೆಸ್ ಹೈಕಮಾಂಡ್‌ನ ಬುಲಾವ್ ಮೇರೆಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಇವರುಗಳು ಇಂದು ಬೆಳಗ್ಗೆ ವಿಶೇಷ ವಿಮಾನದಲ್ಲಿ ದೆಹಲಿಗೆ ತೆರಳಿದ್ದಾರೆ. ಇಂದು ಸಂಜೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಕಾಂಗ್ರೆಸ್‌ನ ಉನ್ನತ ಮಟ್ಟದ ಸಭೆ ನಡೆಯಲಿದ್ದು, ಈ ಸಭೆಯಲ್ಲಿ ನೂತನ ಸಚಿವರ ಪಟ್ಟಿಯನ್ನು ಅಂತಿಮಗೊಳಿಸಲಾಗುತ್ತದೆ.



ಇಂದಿನ ಸಭೆಯಲ್ಲಿ ಕಾಂಗ್ರೆಸ್ ವ-ರಿಷ್ಠ ಹಾಗೂ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್‌ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲಾ ಇವರೆಲ್ಲಾ ಭಾಗಿಯಾಗಲಿದ್ದು, ಸಚಿವರ ಪಟ್ಟಿಗೆ ಇಂದೇ ಮೋಕ್ಷ ಸಿಗುವ ಸಾಧ್ಯತೆಗಳು ಹೆಚ್ಚಿವೆ. ರಾಜ್ಯ ಸಚಿವ ಸಂಪುಟದಲ್ಲಿ 20 ಸ್ಥಾನಗಳು ಖಾಲಿ ಇದ್ದು, ಆ ಸ್ಥಾನಗಳಿಗೆ 35 ಕ್ಕೂ ಹೆಚ್ಚು ಶಾಸಕರು ಆಕಾಂಕ್ಷಿಗಳಾಗಿದ್ದಾರೆ. ಹಾಗಾಗಿ ಸಚಿವರ ಪಟ್ಟಿ ಅಂತಿಮಗೊಳಿಸುವುದು ವ-ರಿಷ್ಠರಿಗೆ ತಲೆ ನೋವು ತಂದಿದ್ದು, ಇದರ ಜತೆಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಹರಿಪ್ರಸಾದ್ ಸಹ ತಮ್ಮ ಕಟ್ಟಾ ಬೆಂಬಲಿಗ ಶಾಸಕರಿಗೂ ಸಚಿವ ಸ್ಥಾನ ಬೇಕು ಎಂದು ಪಟ್ಟು ಹಿಡಿದಿದ್ದು, ಸಚಿವರ ಪಟ್ಟಿ ಅಂತಿಮಗೊಳಿಸುವುದು ಗಜ ಪ್ರಸವದಂತಾಗಿದೆ.

ಕಳೆದ ವಾರ ದೆಹಲಿಗೆ ತೆರಳಿದ್ದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಹರಿಪ್ರಸಾದ್ ಜತೆ ವರಿಷ್ಠರು ಸಚಿವರ ಪಟ್ಟಿಯನ್ನು ಅಂತಿಮಗೊಳಿಸುವ ಸಂಬಂಧ ಒಂದು ಸುತ್ತಿನ ಚರ್ಚೆ ನಡೆಸಿದ್ದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನಖರ್ಗೆ ಅವರ ಪುತ್ರನ ಆರೋಗ್ಯದಲ್ಲಿ ಏರುಪೇರಾದ ಕಾರಣ ಖರ್ಗೆ ಅವರು ಸಭೆಯನ್ನು ಮೊಟಕುಗೊಳಿಸಿ ಬೆಂಗಳೂರಿಗೆ ವಾಪಸ್ಸಾಗಿದ್ದರು. ಹಾಗಾಗಿ ಸಚಿವರ ಪಟ್ಟಿ ತಯಾರಿಸುವ ಚರ್ಚೆಯ ಸಭೆ ಅಪೂರ್ಣಗೊಂಡಿತ್ತು.

## ಮಳೆ ಪ್ರಾಪ್ತಿಗಾಗಿ ಅಮ್ಮನ ಉತ್ಸವ : ವಿಶೇಷ ಪೂಜೆ, ಪುನಸ್ಕಾರ ಸೇರಿದಂತೆ ನಾನಾ ಧಾರ್ಮಿಕ ಪೂಜಾ ಕಾರ್ಯಕ್ರಮಗಳು

**ನೈಜ್ಯ ದೇಸೆ ನ್ಯೂಸ್**

**ಬಳ್ಳಾರಿ / ಕಂಪ್ಲಿ : ಮುಂಗಾರು ಮಳೆ ಪ್ರಾರ್ಥಿಸಿ, ಪಟ್ಟಣದಲ್ಲಿರುವ ಸಹಸ್ರಾರು ಭಕ್ತರ ಆರಾಧ್ಯ ದೇವತೆ ಶ್ರೀ ಗ್ರಾಮ ದೇವತೆ ಮಾರೆಮ್ಮ ದೇವಸ್ಥಾನದ ಹೊರಗಡೆಯಲ್ಲಿ ಸಣ್ಣದೊಂದು ಚಪ್ಪರ ಹಾಕಿ, ಮಾರೆಮ್ಮ ದೇವಿಯ ಒರಗಿನ ಅಮ್ಮನನ್ನು ಕೂರಿಸಿ, ವಿಶೇಷ ಪೂಜೆ, ಉತ್ಸವ ಮೂಲಕ ವಿವಿಧ ಧಾರ್ಮಿಕ ಕಾರ್ಯಕ್ರಮ ಮಂಗಳವಾರ ಶ್ರದ್ಧಾಭಕ್ತಿಯಿಂದ ನೆರವೇರಿದವು.**

ಮಳೆ ಪ್ರಾಪ್ತಿ ಮತ್ತು ಲೋಕಕಲ್ಯಾಣ-ಕ್ಕಾಗಿ ಶ್ರೀ ಗ್ರಾಮ ದೇವತೆ ಮಾರೆಮ್ಮ ದೇವಿಯ ಸಕಲ ಸದ್ಭಕ್ತ ಮಂಡಳಿಯವರು ಹಾಗೂ ಭಕ್ತರು ಇಲ್ಲಿನ ತುಂಗಭದ್ರ ನದಿಗೆ ಬೆಳಗಿನ ಜಾವ ತೆರಳಿ, ನಂತರ ಗಂಗಾದೇವಿಗೆ ವಿಶೇಷ ಪೂಜೆಯನ್ನು ಸಲ್ಲಿಸಿದ ನಂತರ ತನಗೊಡ ಒತ್ತು, ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಉತ್ಸವ ಮೆರವಣಿಗೆ ಶ್ರದ್ಧೆಯಿಂದ ನಡೆಸಿದರು. ತದನಂತರ ಮಾರೆಮ್ಮ ದೇಗುಲದ ಹೊರಭಾಗದಲ್ಲಿ ಚಪ್ಪರ ಹಾಕಿ ಪ್ರತಿಷ್ಠಾಪಿಸಿ ವಿಶೇಷ ಪೂಜೆಯನ್ನು ಸಲ್ಲಿಸಿದರು. ಸರ್ವ ಸಮುದಾಯದವರು ದೇವಿಗೆ ಹೋಳಿಗೆ ನೈವೇದ್ಯವನ್ನು ಸಮರ್ಪಿಸಿದರು. ನಂತರ ದೇವಿಯ ತನುಗೊಡದ ಜೊತೆಗೆ ಅಲ್ಲಿನ ಪ್ರತಿಯೊಂದು ವಸ್ತುಗಳನ್ನು ಚೀಲಗಳಲ್ಲಿ ತುಂಬಿಕೊಂಡು ಅವುಗಳನ್ನು ಡೊಳ್ಳು ಮತ್ತು ಜಾನಪದ ಕಲಾತಂಡಗಳೊಂದಿಗೆ ಪಟ್ಟಣದ ಹೊರವಲಯದ ಹೊರಮ್ಯಾರೆಗೆ ಬಿಟ್ಟು ಬರಲಾಯಿತು.



ಮಳೆ, ಬೆಳೆಯೊಂದಿಗೆ ರೈತರು, ನಾಡಿನ ಜನರು ನೆಮ್ಮದಿ ನೀಡಲೆಂದು ಬೇಡಿಕೊಂಡರು. ನಂತರ ಮುಖಂಡ ಎಂ.ಗೋಪಾಲ ಮಾತನಾಡಿ, ಈ ಬಾರಿಯ ಮುಂಗಾರು ಮಳೆಗಳು ಕಣ್ಮರೆಯಾಗಿವೆ. ಇದರಿಂದ ನಾಡಿನಲ್ಲಿ ಸಮೃದ್ಧ ಮಳೆ ಪ್ರಾರ್ಥಿಸಿ, ಕಳೆದ ಹನ್ನೊಂದು ದಿನ ಗುಡ್ಡೇಕಲ್ಲಿಗೆ ಮಡಿಯೊಂದಿಗೆ ನೀರೆರೆಯಲಾಗಿದೆ. ಹನ್ನೊಂದನೇ ದಿನವಾದ ಮಂಗಳವಾರದಂದು ತನುಗೊಡದೊಂದಿಗೆ ಉತ್ಸವ ಮೆರವಣಿಯೊಂದಿಗೆ ಒರಗಿನ ಅಮ್ಮನ ಪುಜೆ, ಪುನಸ್ಕಾರ ನೆರವೇರಿಸಲಾಗಿದೆ. ಒರಗಿನ ಅಮ್ಮ ನಮ್ಮ ಪ್ರಾರ್ಥನೆ ಆಲಿಸಿ, ಮಳೆಯನ್ನು ದಯಪಾಲಿಸಲಿ ಎಂದರು. ಈ ಸಂದರ್ಭದಲ್ಲಿ ಮುಖಂಡರಾದ ಎನ್. ಯಲ್ಲಪ್ಪ, ಎನ್.ನಾಗರಾಜ, ದೊಡ್ಡಶೇಖಣ್ಣ, .ನಾಗಪ್ಪ, ಎನ್.ದ್ಯಾವಣ್ಣ, ಮಲ್ಲಯ್ಯ, ವಿರುಪಣ್ಣ, ವೆಂಕಟಾಪತಿ, ವೆಂಕಟರಮಣ, ಈರಣ್ಣ ಸೇ-ರಿದಂತೆ ಮಾರೇಮ್ಮ ದೇವಿಯ ಸದ್ಭಕ್ತರು ಇದ್ದರು.

## ವಿಶ್ವಕರ್ಮ ವಸತಿ ನಿಲಯ ಜವಳಗೇರದಲ್ಲಿ ಸಸಿ ನೆಡುವ ಮೂಲಕ ವಿಶಿಷ್ಟ ಆಚರಣೆ

**ನೈಜ್ಯ ದೇಸೆ ನ್ಯೂಸ್**

**ಸಿಂಧನೂರು: ತಾಲೂಕಿನ ಜವಳಗೇರಾ ಗ್ರಾಮದ ಶ್ರೀ ಅಜಾತ ನಾಗಲಿಂಗ ಸ್ವಾಮಿ ಮಠದ ಹತ್ತಿರ ನಿರ್ಮಾಣವಾಗುತ್ತಿರುವ ನೂತನ ವಿಶ್ವಕರ್ಮ ವಿದ್ಯಾರ್ಥಿ ನಿಲಯದ ಆವರಣದಲ್ಲಿ, ವಿಶ್ವಕರ್ಮ ಸಮಾಜದ ಪರಮ ಪೂಜ್ಯ ಶ್ರೀ ಶ್ರೀ ಶ್ರೀ ಸೂರ್ಯನಾರಾಯಣ ಮಹಾಸ್ವಾಮಿಗಳ (ಶ್ಯಾಡಲಗೇರಿ) ಸಮ್ಮುಖದಲ್ಲಿ, ರಾಯಚೂರು ಜಿಲ್ಲಾ ವಿಶ್ವಕರ್ಮ ಸಮಾಜದ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸಿಂಧನೂರು ಶ್ರೀ ಕಾಳಿಕಾದೇವಿ ದೇವಸ್ಥಾನ ಟ್ರಸ್ಟ್ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಸವರಾಜ ಪತ್ತಾರ ಕಮತಗಿ ಅವರ 45ನೇ ವರ್ಷದ ಹುಟ್ಟುಹಬ್ಬವನ್ನು ಸಸಿ ನೆಡುವ ಮೂಲಕ ಅತ್ಯಂತ ವಿಶೇಷ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು.**



ಇದೇ ವೇಳೆ ಶ್ರೀ ಅಜಾತ ನಾಗಲಿಂಗ ಸ್ವಾಮಿ ಮಠಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ, ಸ್ವಾಮೀಜಿಯವರ ದಿವ್ಯ ಸಾನಿಧ್ಯದಲ್ಲಿ ದೇವರಿಗೆ ನಮಿಸಿ ಆಶೀರ್ವಾದ ಪಡೆದುಕೊಳ್ಳಲಾಯಿತು. ಆತ್ಮೀಯರು, ಸಮಾಜ ಸೇವಕರು, ಸಂಘಟನಾ ಚತುರರು ಹಾಗೂ ಯುವ ಮುಖಂಡರ ಸಮ್ಮುಖದಲ್ಲಿ ಈ ಕಾರ್ಯಕ್ರಮವು ಯಶಸ್ವಿಯಾಗಿ ಜರುಗಿತು. ಈ ಶುಭ ಸಂದರ್ಭದಲ್ಲಿ ಪರಿಸರ ರಾಜ್ಯ ಪ್ರಶಸ್ತಿ ಪುರಸ್ಕೃತರು ಹಾಗೂ ವನಸಿರಿ ಫೌಂಡೇಷನ್ ರಾಜ್ಯಾಧ್ಯಕ್ಷರಾದ ಅಮರೇಗೌಡ ಮಲ್ಲಾಪುರ, ವಿಶ್ವಕರ್ಮ ಸಮಾಜದ ಮುಖಂಡರಾದ ಮಂಜುನಾಥ ಬಡಿಗೇರ, ಮರಿಸ್ವಾಮಿ, ಚನ್ನಪ್ಪ ಕೆ. ಹೊಸಹಳ್ಳಿ, ರಾಜು ಬಳಗಾನೂರು, ಮೌನೇಶ ಕಫಾಳ, ಅಶೋಕ ಬಾದರ್ಲಿ, ಅಜಾತ ನಾಗಲಿಂಗ ಸ್ವಾಮಿ ಮಠದ ಅರ್ಚಕರಾದ ಕಾಶೀಪತಿ ಜವಳಗೇರ, ದೇವರಾಜ ಎಲೆಕೂಡ್ಲಿಗಿ, ವೀರೇಶ ಬಡಿಗೇರ ಸೇರಿದಂತೆ ಅನೇಕ ಗಣ್ಯರು ಹಾಗೂ ಸಮಾಜ ಬಂಧುಗಳು ಉಪಸ್ಥಿತರಿದ್ದರು.

## ಲಿಂಗದಹಳ್ಳಿ ಗ್ರಾಮದ ರಸ್ತೆ ಅಭಿವೃದ್ಧಿಗೆ ಒತ್ತಾಯಿಸಿ ಗ್ರಾಮಸ್ಥರ ಮನವಿ

**ನೈಜ್ಯ ದೇಸೆ ನ್ಯೂಸ್**

**ಜಾಲಹಳ್ಳಿ: ಚಿಂಚೋಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಲಿಂಗದಹಳ್ಳಿ ಗ್ರಾಮದ ರಸ್ತೆಗಳನ್ನು ಅಗಲೀಕರಣ ಹಾಗೂ ದುರಸ್ತಿಗೊಳಿಸುವಂತೆ ಒತ್ತಾಯಿಸಿ ಗ್ರಾಮಸ್ಥರು ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ, ಲೋಕೋಪಯೋಗಿ ಇಲಾಖೆ ಹಾಗೂ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.**

ಗ್ರಾಮಸ್ಥರ ಪ್ರಕಾರ, ಲಿಂಗದಹಳ್ಳಿ?ಮುದಗೋಟ ಹಾಗೂ ಲಿಂಗದಹಳ್ಳಿ?ಜಾಲಹಳ್ಳಿ ಸಂಪರ್ಕ ರಸ್ತೆಗಳು ಸಂಪೂರ್ಣ ಹದಗೆಟ್ಟಿದ್ದು, ಜನಸಾಮಾನ್ಯರು, ರೈತರು, ವಿದ್ಯಾರ್ಥಿಗಳು ಹಾಗೂ ವಾಹನ ಸವಾರರು ನಿತ್ಯ ಸಂಚಾರಕ್ಕೆ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ರಸ್ತೆಗಳಲ್ಲಿ ಉಂಟಾಗಿರುವ ಗುಂಡಿಗಳು ಮತ್ತು ಹದಗೆಟ್ಟ ಸ್ಥಿತಿಯಿಂದ ಅಪಘಾತಗಳ ಸಂಭವ ಹೆಚ್ಚಾಗಿದ್ದು, ಅನಾಹುತಗಳು ಸಂಭವಿಸುವ ಮುನ್ನವೇ ಅಧಿಕಾರಿಗಳು ತುರ್ತು ಕ್ರಮ ಕೈಗೊಂಡು ರಸ್ತೆ ದುರಸ್ತಿ ಹಾಗೂ ಅಗಲೀಕರಣ ಕಾಮಗಾರಿ ಕೈಗೊಳ್ಳಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.



ಕಳೆದ ಐದು ವರ್ಷಗಳಿಂದ ರಸ್ತೆ ದುರಸ್ತಿಯಾಗದೆ ಇರುವುದ-ರಿಂದ ಸಾರ್ವಜನಿಕರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದು, ರೈತರು, ಕೂಲಿಕಾರರು ಮತ್ತು ವಿದ್ಯಾರ್ಥಿಗಳು ರಸ್ತೆಯಲ್ಲಿ ಸಂಚರಿಸಲು ಭಯಪಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಕರವೇ ತಾಲೂಕು ಅಧ್ಯಕ್ಷ ನಂದಪ್ಪ ಮಡ್ಡಿ, ನಂದಪ್ಪ ಪವಡಿ, ರಾಮನಗೌಡ, ನಾಗಪ್ಪ, ಅಮರೇಶ, ನಾಗಲಿಂಗ, ವೆಂಕೋಬ ಮೇಟಿ, ಶರಣಪ್ಪ, ಸರ್ಜನ್, ಮಲ್ಲಯ್ಯ, ಭೀಮಣ್ಣ ನಾಯಕ, ಪರಮಣ್ಣ, ಗಂಗಾಧರ್, ಬಸವರಾಜ್ ಸೇ-ರಿದಂತೆ ಹಲವರು ಉಪಸ್ಥಿತರಿದ್ದರು.

# ಬರಿದಾದ ಕೆರೆ ಅಂಗಳ : ನೀರಿನ ಜಲಕ್ಕಾಗಿ ಜನರ ಹಾಹಾಕಾರ : ಹನಿ ನೀರಿಗೂ ಆಹಾಕಾರ

**ನೈಜ್ಯ ದೇಸೆ ನ್ಯೂಸ್**

**ಬಳ್ಳಾರಿ / ಕಂಪ್ಲಿ (ಕುಡತಿನಿ): ಕಳೆದ ವರ್ಷದಲ್ಲಿ ಕುಡಿಯುವ ನೀರಿನ ಸಂತೃಪ್ತಿಯಲ್ಲಿ ಜನ-ರಿದ್ದರು. ಆದರೆ, ಪ್ರಸಕ್ತ ವರ್ಷದ ಮುಂಗಾರಿನ ಮಳೆ ಕೈಕೊಟ್ಟ ಪರಿಣಾಮ ಜನ ಜಾನುವಾರುಗಳು, ಪಕ್ಷಿ, ಪ್ರಾಣಿಗಳ ಸಂಕುಲಕ್ಕೆ ಆಧಾರಸ್ತಂಬವಾಗಿದ್ದ, ಕೆರೆ, ಕಟ್ಟೆ, ಹಳ್ಳ-ಕೊಳ್ಳಗಳ ನೀರಿನ ಜಲ ಬತ್ತಿದ್ದು, ಕುಡಿಯುವ ನೀರಿನ ಕಂಟಕ ಎದುರಾಗಿದೆ.**

ಸಮೀಪದ ಕುಡತಿನಿ ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆ ಗಂಭೀರತೆ ಪಡೆದುಕೊಂಡಿದೆ. ಹನಿ ನೀರಿಗಾಗಿ ತಿರುಗಾಡು ವಂತಾಗಿದೆ. ಮಳೆಗಾಲ ಬಂದರೂ ಗ್ರಾಮಸ್ಥರಿಗೆ ನೀರಿನ ಸಮಸ್ಯೆ ತಪ್ಪಿಲ್ಲ. ಮಹಿಳೆಯರು, ಮಕ್ಕಳು ಕೂಡ ಅಲೆದಾಡುತ್ತಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಗಾಢ ನಿದ್ರೆಗೆ ಜಾರಿದಂತಾಗಿದೆ. ಇಲ್ಲಿ ಸುಮಾರು 19 ವಾರ್ಡ್‌ಗಳಿದ್ದು, 35 ಸಾವಿರ ಜನಸಂಖ್ಯೆ ಇದೆ. 45 ಸಾವಿರ ನಲ್ಲಿಗಳಿದ್ದು, ಇದರಲ್ಲಿ ಕೆಲವೊಂದು ಮಾತ್ರ ಚಾಲ್ತಿಯಲ್ಲಿವೆ. ಇನ್ನು 9 ಶುದ್ಧ ನಿರ್ವಹಿಸುತ್ತಿವೆ. 85 ಬೋರ್‌ವೆಲ್‌ಗಳನ್ನು ಕೊರೆಸಲಾಗಿದ್ದು, ಇದರಲ್ಲಿ ಕೆಲವೊಂದುಮಾತ್ರ ಚಾಲ್ತಿಯಲ್ಲಿದ್ದು, ಇನ್ನುಳಿದವು



ಅಂತರ್ಜಲ ಕುಸಿತದಿಂದ ನಿರುಪಯುಕ್ತ ಗೊಂಡಿವೆ.

ಇಲ್ಲಿನ ಜನತೆ ಜಿಂದಾಲ್ ಮತ್ತು ಕೃಷಿ ಹಾಗೂ ಕೂಲಿ ಕಾಯಕವನ್ನೇ ನೆಚ್ಚಿಕೊಂಡು ಬದುಕು ಸಾಗಿಸುತ್ತಿದ್ದಾರೆ. ಕುಡತಿನಿ ಪಟ್ಟಣ-ಕ್ಕೆ ಒಂದೇ ಕುಡಿಯುವ ನೀರಿನ ಕೆರೆ ನಿರ್ಮಾಣಗೊಂಡಿದ್ದು, ತಿಮ್ಮಲಾಪುರ ಕಾಲುವೆಗೆ ನೀರು ಹರಿದರೆ ಮಾತ್ರ ಕೆರೆಗೆ ನೀರು ಹರಿಯುತ್ತದೆ. ಇಲ್ಲವಾದರೆ ತಿಮ್ಮಲಾಪುರ ಗ್ರಾಮದಿಂದ ನೇರವಾಗಿ ಬೋರ್‌ವೆಲ್ ಗಳಿಂದ ಕುಡುತಿನಿ ಪಟ್ಟಣಕ್ಕೆ ನೀರು ಒದಗಿಸಲಾಗುತ್ತದೆ. ಸರಿಯಾದ ಸಮಯಕ್ಕೆ ಪಟ್ಟಣದ ವಾರ್ಡ್‌ಗಳಿಗೆ ನೀರು ಸರಬರಾಜಾಗದ ಪರಿಣಾಮ ಶಾಲಾ ಮಕ್ಕಳು ಹಾಗೂ ಹಿರಿಯರು ಕೆಲಸ ಕಾರ್ಯ ಬಿಟ್ಟು ನೀರಿಗಾಗಿ ಕಾಯಬೇಕಾದ ದುಸ್ಥಿತಿ ನಿರ್ಮಾಣವಾಗಿದೆ. ಪಟ್ಟಣದ ಸುತ್ತಮುತ್ತ ವಿವಿಧ ಕೈಗಾರಿಕಾ ಕಂಪನಿ ಗಳಿದ್ದು, ನಾಗರಿಕರ ಆರೋಗ್ಯದ ಮೇಲೆ ಪರಿಣಾಮ ಬಿರುವುದರ ಜೊತೆಗೆ ಅಂತರ್ಜಲ ಕುಸಿತದಿಂದ ಪಟ್ಟಣ ಸೇರಿ ಸುತ್ತಮುತ್ತ ಗ್ರಾಮದಲ್ಲಿ ಕೂಡ ನಲ್ಲಿಗಳು ಹಾಗೂ ಜನರು ಅನೇಕ ಸಮಸ್ಯೆ ಅನುಭವಿಸುತ್ತಿದ್ದಾರೆ.

ಪಟ್ಟಣಕ್ಕೆ ಸರಿಯಾದ ಸಮಯಕ್ಕೆ ನೀರು ಒದಗಿಸುವಂತೆ ಪಟ್ಟಣ ಪಂಚಾಯ್ತಿ ಅಧಿಕಾ-ರಿಗಳಿಗೆ ಸಂಘ ಸಂಸ್ಥೆಗಳು ಹಾಗೂ ನಾಗರಿಕರು ಮನವಿ ಸಲ್ಲಿಸಿದರೂ ಪ್ರಯೋಜನ ಇಲ್ಲದಂತಾಗಿದೆ. ಪಟ್ಟಣದಲ್ಲಿ ಪಟ್ಟಣ ಪಂಚಾಯ್ತಿ ಇದ್ದು, ವರ್ಷಕ್ಕೆ ನೂರಾರು ಕೋಟಿ ಅನುದಾನ ಸರ್ಕಾರದಿಂದ ಬರುತ್ತಿದ್ದರೂ ಜನರಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸುವಲ್ಲಿ ವಿಫಲಗೊಂಡಿರುವುದು ವಿಪರ್ಯಾಸವಾಗಿದೆ.

**ಈ ಬಾರಿಯ ಮಳೆಗಳು ಕೈಕೊಟ್ಟ ಹಿನ್ನಲೆ ಕೆರೆಗೆ ನೀರಿಲ್ಲದಂತಾಗಿದೆ. ಪಟ್ಟಣದಲ್ಲಿ ಜನತೆಗೆ ನೀರಿನ ಸಮಸ್ಯೆಯಾಗದಂತೆ ಕ್ರಮವಹಿಸಿ, ಬೋರ್‌ವೆಲ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಕೆ.ಇ.ಡಿ. ಬೋರ್ಡಿನ್ನಂದ ತಿಮ್ಮಲಾಪುರ ಮತ್ತು ಕುಡುತಿನಿ ಪಟ್ಟಣ ಸೇರಿ 25 ಬೋರ್‌ವೆಲ್ ಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ, ನೀರಿನ ಸಮಸ್ಯೆ ಆಗದಂತೆ ನಿಗಾ ವಹಿಸಲಾಗುವುದು.**

**ಎನ್. ಶಿವಲಿಂಗಪ್ಪ, ಮುಖ್ಯಾಧಿಕಾರಿ, ಪಪಂ, ಕುಡತಿನಿ.**

**ಕಳೆದ ವರ್ಷದಲ್ಲಿ ಮಳೆಯಿಂದಾಗಿ ಕೆರೆಗಳಿಗೆ ಕಳೆ ಬಂದಿತ್ತು. ಆದರೆ, ಈ ಬಾರಿ ಮಳೆ ಇಲ್ಲದೇ ಇರುವುದರಿಂದ ಕುಡತಿನಿಗೆ ನೀರೊದಗಿಸುವ ಕೆರೆಯೂ ಸಂಪೂರ್ಣವಾಗಿ ಬರಿದಾಗಿದೆ. ಇದ-ರಿಂದ ಕುಡತಿನಿ ಪಟ್ಟಣ ಹಾಗೂ ಗ್ರಾಮೀಣ ಭಾಗದ ಜನತೆಗೆ ನೀರಿ ಸಮಸ್ಯೆ ವಿಪರೀತವಾಗಿದ್ದು, ಮತ್ತು ಪ್ರಾಣಿ, ಪಕ್ಷಿಗಳ ಸಂಕುಲಕ್ಕೆ ಹನಿ ನೀರಿಗೂ ಕಂಟಕ ಎದುರಾಗಿದೆ. ಸಾಕಷ್ಟು ಜನರು ದಿನಕೂಲಿಯಲ್ಲೇ ದಿನಿತ್ಯದ ಜೀವನ ಸಾಗಿಸುವ ಜನರಿಗೆ ಕುಡಿಯುವ ನೀರಿನ ಸಮಸ್ಯೆ ತಲೆ ದೋರಿದೆ. ಆದ್ದರಿಂದ ಅಧಿಕಾರಿಗಳು ಎಚ್ಚರವಹಿಸಿ, ಕುಡಿಯುವ ನೀರಿನ ವ್ಯವಸ್ಥೆಗೆ ಸೂಕ್ತಕ್ರಮವಹಿಸಬೇಕು.**

**ಟಿ.ಕೆ. ಕಾಮೇಶ್, ವಕೀಲರು ಕುಡತಿನಿ.**

## ಸಾಹಿತ್ಯ ಸಿಂಚನ

### ಮತ್ತೆ ಮತ್ತೆ ಅಮ್ಮನ ಮಮತೆ

ಎಷ್ಟು ಸಲ ಬಿದ್ದರೂ ಎತ್ತಿ ನಿಲ್ಲಿಸೋ ಕೈ
ಎಷ್ಟು ಸಲ ತಪ್ಪಿದ್ರೂ ಕ್ಷಮಿಸೋ ಮನಸು
ಅದು ಅಮ್ಮನ ಮಮತೆ
ಮತ್ತೆ ಮತ್ತೆ ಸಿಗೋ ಉಚಿತ ವರ

ಹೊಟ್ಟೆ ತುಂಬ ಊಟ ಮಾಡಿದ್ನಾ ಅಂತ
ದಿನಾ ಕೇಳೋ ಒಂದೇ ಪ್ರಶ್ನೆ
ಬೇಸರ ಆದ್ರೂ ಉತ್ತರ ಕೊಡ್ತೀವಿ
ಆದ್ರೆ ಅವಳಿಗೆ ಅದು ಮಂತ್ರ

ಜ್ವರ ಬಂದರೆ ರಾತ್ರಿ ಮಲಗೋದಿಲ್ಲ
ತಲೆ ಸವರುತ್ತಾ ಕೂತಿರ್ತಾಳೆ
ಕಣ್ಣಲ್ಲಿ ನಿದ್ದೆ ಇಲ್ಲ, ಮನಸಲ್ಲಿ ಭಯ
"ನನ್ನ ಮಗುವಿಗೆ ಏನಾಗಬಾರದು" ಅಂತ

ಕೋಪದಲ್ಲಿ ಬೈದ್ರೂ ನಾವೇ
ಬೇಜಾರ್ ಮಾಡಿಕೊಂಡ್ರೂ ನಾವೇ
ಆದ್ರೆ ಊಟದ ಹೊತ್ತಿಗೆ ಕರೆಯೋಳು
"ಬಾ ಕಂದ, ಊಟ ಆರುತ್ತೆ" ಅಂತ

ನಾವು ದೊಡ್ಡವರಾದ್ರೂ ಅವಳಿಗೆ
ಇನ್ನೂ ಚಿಕ್ಕ ಕೂಸೇ ನೀನು
ಮದುವೆ ಆಗಿ ಮಕ್ಕಳಾದ್ರೂ
ಅವಳ ಕಣ್ಣಿಗೆ ನಾವಿನ್ನೂ ಮಗುವೇ

ಸಾವಿರ ಜನ ಕೈ ಬಿಟ್ಟರೂ
ಅಮ್ಮ ಮಾತ್ರ ಕೈ ಬಿಡೋದಿಲ್ಲ
ಪ್ರಪಂಚವೆಲ್ಲಾ ಬೇಡ ಅಂದ್ರೂ
ಅವಳ ಎದೆ ಬಾಗಿಲು ತೆರೆದಿರುತ್ತೆ

ಮತ್ತೆ ಮತ್ತೆ ಹೇಳ್ತೀನಿ ಗುರು
ಅಮ್ಮ ಇದ್ದ ಮನೆಗೆ ದೇವರೇ ಬೇಕಿಲ್ಲ
ಅವಳ ಕಾಲಿಗೆ ನಮಸ್ಕಾರ ಮಾಡಿದ್ರೆ
ಸ್ವರ್ಗ ನಮ್ಮ ಮನೆ ಬಾಗಿಲಿಗೆ ಬರುತ್ತೆ

ಅಮ್ಮನ ಮಮತೆ ಸಾಲ ಅಲ್ಲ
ಅದನ್ನ ತೀರಿಸೋಕೆ ಆಗೋದಿಲ್ಲ
ಕೊನೆ ಉಸಿರು ಇರೋವರೆಗೂ
ಅವಳ ಋಣದಲ್ಲೇ ಇರ್ತೀವಿ ನಾವು
ನೀವೆಲ್ಲ....

ಎಸ್. ದುರಗಪ್ಪ. ಕುಷ್ಟಗಿ.

## ಜು.24ಕಂಪ್ಲಿಯಲ್ಲಿ ಪತ್ರಿಕಾ ದಿನಾಚರಣೆ

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಪಟ್ಟಣದ ಶ್ರೀ ವಿದ್ಯಾಸಾಗರ ಇಂಟರ್ನ್ಯಾಷನಲ್ ಸ್ಕೂಲ್ ಸಭಾಂಗಣದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕಂಪ್ಲಿ ತಾಲೂಕು ಘಟಕದಿಂದ ಜು.24ರಂದು ಬೆಳಿಗ್ಗೆ 11ಗಂಟೆಗೆ 'ಪತ್ರಿಕಾ ದಿನಾಚರಣೆ' ಸಮಾರಂಭ ಹಮ್ಮಿಕೊಂಡಿದೆ.**




ಶಾಸಕ ಜೆ.ಎನ್.ಗಣೇಶ್ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು, ಸಂಘದ ಅಧ್ಯಕ್ಷ ಬಂಗಿ ದೊಡ್ಡ ಮಂಜುನಾಥ ಅಧ್ಯಕ್ಷತೆವಹಿಸಲಿದ್ದಾರೆ. ಕರ್ನಾಟಕ ಮಾಧ್ಯಮ ಅಕಾಡೆಮಿ ಸದಸ್ಯ ಕೆ.ನಿಂಗಜ್ಜ ಅವರು ವಿಶೇಷ ಉಪನ್ಯಾಸ ನೀಡಲಿ ದ್ದಾರೆ. ಮುಖ್ಯ ಅತಿಥಿಗಳಾಗಿ ಸಂಘದ ಜಿಲ್ಲಾಧ್ಯಕ್ಷ ಎನ್.ವೀರಭದ್ರಗೌಡ, ರಾಜ್ಯ ಸಮಿತಿ ಸದಸ್ಯ ಬಸವರಾಜ ಹರನಹಳ್ಳಿ, ತಹಸೀಲ್ದಾರ್ ಜೂಗಲ ಮಂಜು ನಾಯಕ, ಕಂಪ್ಲಿ ವೃತ್ತ ಪೊಲೀಸ್ ಠಾಣೆಯ ಪಿಐ ಕೆ.ಬಿ.ವಾಸುಕುಮಾರ್, ನೀರಾ ವರಿ ನಿಗಮದ ಉಪ ವಿಭಾಗದ ಎಇಇ ಎ.ಶ್ರೀನಿವಾಸ್, ತಾಲೂಕು ಪಂಚಾಯಿತಿ ಇಒ ಆರ್.ಕೆ.ಶ್ರೀಕುಮಾರ್, ಕುರುಗೋಡು ಬಿಇಒ ಟಿ.ಎಂ.ಸಿದ್ದಲಿಂಗಮೂರ್ತಿ, ಪುರಸಭೆ ಪ್ರಭಾರಿ ಮುಖ್ಯಾಧಿಕಾರಿ ಬಿ.ಮಲ್ಲಿಕಾರ್ಜುನ, ಸತ್ಯ ಅರುಣೋದಯ ಸೇವಾ ಸಮಿತಿ ಅಧ್ಯಕ್ಷ ಡಿ.ವಿ.ಸತ್ಯನಾರಾಯಣ, ನವಭಾರತ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಪಿ.ನಾಗೇಶ್ವರರಾವ್, ಕ.ಕಾ.ನಿ.ಪ.ಸಂಘದ ಜಿಲ್ಲಾ ಕಾರ್ಯದರ್ಶಿ ದ್ಯಾಮನಗೌಡ ಪಾಟೀಲ್, ಜಿಲ್ಲಾ ಸಮಿತಿ ಸದಸ್ಯ ಜಿ.ಚಂದ್ರಶೇಖ ರಗೌಡ ಆಗಮಿಸಲಿದ್ದಾರೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಪಿ.ವೀರೇಶ್ ತಿಳಿಸಿದ್ದಾರೆ.

## ಮಳೆಗಾಗಿ ಪ್ರಕೃತಿ ಮಾತೆಗೆ ಪೂಜೆ ಸಲ್ಲಿಸಿ ಪ್ರಾರ್ಥನೆ ಸಲ್ಲಿಸಿದ ವನಸಿರಿ ಪೌಂಡೇಷನ್

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು ತಾಲೂಕಿನ ಜವಳಗೇರ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ವನಸಿರಿ ಪೌಂಡೇಷನ್(ರಿ) ರಾಯಚೂರು ರಾಜ್ಯ ಘಟಕದ ವತಿಯಿಂದ ಪ್ರಕೃತಿಯನ್ನು ಪೂಜಿಸೋಣ ಮಳೆಯನ್ನು ಭೂಮಿಗೆ ತರಿಸೋಣ ಎನ್ನುವ ಧ್ಯೇಯ ವಾಕ್ಯದೊಂದಿಗೆ ಪ್ರಕೃತಿ ಮಾತೆಗೆ ಪೂಜೆ ಸಲ್ಲಿಸಿ ಮಳೆಗಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು.**

ಜವಳಗೇರ ಶಾಲಾ ಕಾಲೇಜು ವಿದ್ಯಾರ್ಥಿಗಳು ಶಾಲೆಯ ಆವರಣದಲ್ಲಿ ಇರುವ ಶ್ರೀ ದುರ್ಗಾದೇವಿ ದೇವಸ್ಥಾನಕ್ಕೆ ಕುಂಭ ಕಳಸದೊಂದಿಗೆ ಪ್ರದಕ್ಷಿಣೆ ಹಾಕಿ ಸಸಿ ನೆಟ್ಟು, ಸಸಿ ಸುತ್ತ ಕುಂಭಗಳ ಮೂಲಕ ನೀರೇರೆಯುವ ಮೂಲಕ ಬರಗಾಲದಿಂದ ಬಳಲುತ್ತಿರುವ ಕಲ್ಯಾಣ ಕರ್ನಾಟಕವನ್ನು ಸಮೃದ್ಧಿಗೊಳಿಸಲೆಂದು ತುಂಗಭದ್ರಾ ನದಿ ತುಂಬಿ ಹರಿಯಲೆಂದು ಮಳೆಗಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು.



ಕಾರ್ಯಕ್ರಮದ ಕುರಿತು ಕರ್ನಾಟಕ ಪಬ್ಲಿಕ್ (ಪ್ರೌಢ)ಶಾಲೆಯ ಉಪ ಪ್ರಾಂಶುಪಾಲರಾದ ಜಿ.ಎಸ್. ಪಾಟೀಲ್ ಮಾತನಾಡಿ ಒಮ್ಮೆ ಮಳೆ ಬಂದರೆ ಆಸ್ತಿ ಪಾಸ್ತಿ ಹಾನಿ ಉಂಟು ಮಾಡುತ್ತೆ ಮತ್ತೆ ಕೆಲವೊಮ್ಮೆ ಮಳೆ ಇಲ್ಲದೆ ಬರಗಾಲ ಉಂಟಾಗುತ್ತದೆ.ಈ ವರ್ಷ ನಮ್ಮ ಭಾಗದಲ್ಲಿ ಮಳೆಯಾಗದೆ ಬರಗಾಲ ಛಾಯೆ ಮೂಡಿದೆ.ಬರಗಾಲ ಹೋಗಲಾಡಿಸಲೆಂದು ಇಂದು ನಮ್ಮ ಶಾಲೆಯಲ್ಲಿ ವನಸಿರಿ ಪೌಂಡೇಷನ್ ಸಂಸ್ಥೆ ಪ್ರಕೃತಿ ಮಾತೆಗೆ ಪೂಜೆ ಸಲ್ಲಿಸಿ ಪ್ರಾರ್ಥನೆ ಸಲ್ಲಿಸುವ ಕಾರ್ಯಕ್ರಮ ಹಮ್ಮಿಕೊಂಡಿರುವುದು ಸ್ವಾಗತರ್ಹ. ಈ ಕಾರ್ಯಕ್ರಮದಿಂದಾದರು ಮುಂದಿನ ದಿನಗಳಲ್ಲಿ ಉತ್ತಮ ಮಳೆಯಾಗಿ ರೈತರ ಮೊಗದಲ್ಲಿ ಹರ್ಷ ಉಂಟು ಮಾಡುವಂತಾಗಲಿ ಎಂದು ಪ್ರಕೃತಿ ಮಾತೆಯಲ್ಲಿ ಬೇಡಿಕೊಳ್ಳೋಣ ಎಂದರು.

ನಂತರ ಪರಿಸರ ರಾಜ್ಯ ಪ್ರಶಸ್ತಿ ಪುರಸ್ಕೃತ,ವನಸಿರಿ ಪೌಂಡೇಷನ್ ರಾಜ್ಯಾಧ್ಯಕ್ಷರಾದ ಅಮರೇಗೌಡ ಮಲ್ಲಾಪುರ ಮಾತನಾಡಿ ಈ ಭೂಮಿಮೇಲೆ ಜನಿಸಿರುವ ನಾವುಗಳೆಲ್ಲ ಭೂಮಿ ತಾಯಿಯ ಮಕ್ಕಳು,ನಮ್ಮ ತಂದೆ ತಾಯಿಗಳು ರೈತರು ನಮ್ಮ ಹೊಲಗಳೆಲ್ಲ ಬರುಡು ಭೂಮಿಯಗಿವೆ.ಈ ಬಾರಿ ಮಳೆ ಇಲ್ಲದೆ ಪ್ರಕೃತಿ ಮಾತೆಯ ಒಡಲು ಬರಿದಾಗಿದೆ ಆದ್ದರಿಂದ ಪ್ರಕೃತಿಯನ್ನು ಪೂಜಿಸೋಣ,ತುಂಗೆ ಭದ್ರೆ ತುಂಬಿ ಹರಿಸೋಣ ಮಳೆಯನ್ನು ತ-ರಿಸೋಣ ಎನ್ನುವ ಧ್ಯೇಯ ವಾಕ್ಯದೊಂದಿಗೆ ತುಂಗಭದ್ರೆ ತುಂಬಿ ಹರಿಯುವಂತಾಗಲಿ ಎಂದು ಮಳೆಗಾಗಿ ಪ್ರಕೃತಿ ಮಾತೆಗೆ ಪ್ರಾಥ-ರ್ನೆ ಸಲ್ಲಿಸುವ ಕಾರ್ಯಕ್ರಮ ನಿಮ್ಮೊಂದಿಗೆ ಹಮ್ಮಿಕೊಂಡಿದ್ದೇವೆ ಎಂದು ತಿಳಿಸಿದರು.

ಈ ಸಂಧರ್ಭದಲ್ಲಿ ವನಸಿರಿ ಪೌಂಡೇಷನ್ ಗೌರವ ಅಧ್ಯಕ್ಷ ಶಂಕರಗೌಡ ಎಲೆಕೂಡ್ಲಿಗಿ,ರಾಜ್ಯ ಸಾಮಾಜಿಕ ಜಾಲತಾಣ ಅಧ್ಯಕ್ಷ ಚನ್ನಪ್ಪ ಕೆ ಹೊಸಹಳ್ಳಿ,ಮಸ್ಕಿ ತಾಲೂಕ ಅಧ್ಯಕ್ಷ ರಾಜು ಬಳಗಾನೂರ, ಸದಸ್ಯರಾದ ಆದನಗೌಡ ಎಲೆಕೂಡ್ಲಿಗಿ,ಪುನೀತ್ ಪುಣ್ಯಾಶ್ರಮ ಪಂಪಯ್ಯಸ್ವಾಮಿ,ಆನಂದ ಗುಂಜಳ್ಳಿ ಕಾಲೇಜು ಪ್ರಾಂಶುಪಾಲ ಬಸಲಿಂಗಯ್ಯ,ಹಾಗೂ ಪ್ರೌಢ ಶಾಲಾ ಸಿಬ್ಬಂದಿಗಳು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

## "ರಾಯಚೂರು–ಮಂತ್ರಾಲಯ ಕಬ್ಬಿಣ ಸೇತುವೆಯ ಕಂಬಿ ಕುಸಿತ"

### ತಪ್ಪಿದ ಭಾರೀ ಅನಾಹುತ, ಕೆಲಕಾಲ ಸಂಚಾರ ಸ್ಥಗಿತ; ಸೇತುವೆ ಸುರಕ್ಷತೆ ಕುರಿತು ಸಾರ್ವಜನಿಕರ ಆತಂಕ ಮನೆ ಮಾಡಿದೆ.





❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರು ಮಂತ್ರಾಲಯ ಸಂಪರ್ಕ ಕಲ್ಪಿಸುವ ತುಂಗಭದ್ರಾ ನದಿಯ ಮೇಲಿನ ಸೇತುವೆಯಲ್ಲಿ ಕಬ್ಬಿಣದ ಆಂಗಲ್ ಏಕಾಏಕಿ ಕುಸಿದು ಬಿದ್ದ ಪರಿಣಾಮ ಸೋಮವಾರ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಯಿತು. ಘಟನೆಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.**

ಸೇತುವೆಯ ಮೇಲ್ಭಾಗದಲ್ಲಿದ್ದ ಕಬ್ಬಿಣದ ಆಂಗಲ್ ಕೆಳಗೆ ಬಿದ್ದ ತಕ್ಷಣವೇ ಸೇತುವೆ ಮೇಲೆ ಸಂಚರಿಸುತ್ತಿದ್ದ ವಾಹನಗಳು ನಿಂತಲ್ಲೇ ನಿಂತವು. ಅದೃಷ್ಟವಶಾತ್ ಯಾವುದೇ ವಾಹನ ಅಥವಾ ಪ್ರಯಾಣಿಕರ ಮೇಲೆ ಅದು ಬೀಳದ ಕಾರಣ ಭಾರೀ ಅನಾಹುತ ಕೂದಲೆಳೆಯ ಅಂತರದಲ್ಲಿ ತಪ್ಪಿದೆ. ಮಾಹಿತಿ ತಿಳಿಯುತ್ತಿದ್ದಂತೆ ಆಂಧ್ರಪ್ರದೇಶದ ಮಾದಾವರಂ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಸಂಬಂಧಿತ ಸಿಬ್ಬಂದಿ ಕುಸಿದ ಕಬ್ಬಿಣದ ಆಂಗಲ್ ತೆರವುಗೊಳಿಸಿ ದುರಸ್ತಿ ಕಾರ್ಯ ಕೈಗೊಂಡರು.

ಘಟನೆಯಿಂದ ಸೇತುವೆಯ ಎರಡೂ ಬದಿಗಳಲ್ಲಿ ಕಿಲೋಮೀಟರ್‌ಗಟ್ಟಲೆ ವಾಹನಗಳು ಸಾಲುಗಟ್ಟಿ ನಿಂತಿದ್ದವು. ದುರಸ್ತಿ ಕಾರ್ಯ ಪೂರ್ಣಗೊಂಡ ಬಳಿಕ ಹಂತ ಹಂತವಾಗಿ ವಾಹನ ಸಂಚಾರ ಪುನರಾರಂಭಿಸಲಾಯಿತು. ರಾಜ್ಯಾಂತರ ಸಂಪರ್ಕದ ಪ್ರಮುಖ ಸೇತುವೆಯಲ್ಲಿ ಇಂತಹ ಘಟನೆ ಸಂಭವಿಸಿರುವುದು ಸೇತುವೆಯ ನಿರ್ವಹಣೆ ಹಾಗೂ ಸುರಕ್ಷತೆ ಕುರಿತು ಪ್ರಶ್ನೆಗಳನ್ನು ಎಬ್ಬಿಸಿದೆ. ಸೇತುವೆಯ ಸಂಪೂರ್ಣ ತಾಂತ್ರಿಕ ಪರಿಶೀಲನೆ ನಡೆಸಿ, ಇಂತಹ ಘಟನೆಗಳು ಮರುಕಳಿಸದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

## ಸಾರ್ವಜನಿಕ ಶೌಚಾಲಯ ಬಳಕೆಗೆ ಅವಕಾಶ ಕಲ್ಪಿಸುವಂತೆ ಆನೆಹೊಸೂರು ಗ್ರಾಮಸ್ಥರ ಆಗ್ರಹ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಗ್ರಾಮದ ದವಲ್ ಮಾಲಿಕ್ ಮಠದಿಂದ ಸರ್ಕಾರಿ ಮಾದರಿ ಹಿರಿಯ ಪ್ರಾಥ-ಮಿಕ ಶಾಲೆ ಮಾರ್ಗವಾಗಿ ಹೊಗವ ರಸ್ತೆಯ ಮಧ್ಯದಲ್ಲಿ ಕಳೆದ ಹಲವು ದಿನಗಳಿಂದ ಕಸದ ತಿಪ್ಪೆಗಳು, ಟ್ರ್ಯಾಕ್ಟರ್ ಸಾಮಾನುಗಳು ರಾಶಿ ಹಾಕಲಾಗಿದೆ. ಇದರಿಂದಾಗಿ ಶಾಲಾ ಮಕ್ಕಳು ಮತ್ತು ಸಾರ್ವಜನಿಕರಿಗೆ ಹಾದು ಹೋಗಲು ತುಂಬಾ ತೊಂದರೆಯಾಗುತ್ತಿದೆ.**

ವಾಹನ ಸವಾರರಿಗೆ ಅಪಘಾತದ ಭಯವಿದೆ. ಸ್ವಚ್ಛತೆಯ ಕೊರತೆಯಿಂದ ರೋಗ ಹರಡುವ ಸಾಧ್ಯತೆಯಿದೆ. ಹಾಗೂ ಮಹಿಳೆಯರು ಅನಿವಾರ್ಯವಾಗಿ ರಸ್ತೆ ಬದಿಯಲ್ಲಿಯೇ ಶೌಚಕ್ಕೆ ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಮಹಿಳೆಯರ ಘನತೆಗೆ ಧಕ್ಕೆಯಾಗುತ್ತಿದೆ ಎಂದು ಆರೋಪಿಸಿ ಪಂಚಾಯತ್




ಅಭಿವೃದ್ಧಿ ಅಧಿಕಾರಿಗೆ ಆನೆಹೊಸೂರು ಗ್ರಾಮಸ್ಥರು ಮನವಿಯನ್ನು ಸಲ್ಲಿಸಿದರು

ಕೆ.ಕೆ.ಆರ್.ಡಿ.ಬಿ ಲಿಂಗಸಗೂರು ಇಲಾಖೆ ವತಿಯಿಂದ ಸ್ವಚ್ಛ ಭಾರತ ಮಿಷನ್ ಯೋಜನೆಯಡಿ 25 ಲಕ್ಷ ರೂಪಾಯಿ ವೆಚ್ಚದಲ್ಲಿ ಸಾರ್ವಜನಿಕ ಶೌಚಾಲಯದ ಕಾಮಗಾರಿ ಈಗಾಗಲೇ ಪೂರ್ಣಗೊಂಡಿದೆ. ಆದ-ರೆ ಇಲ್ಲಿಯವರೆಗೂ ಅದನ್ನು ಸಾರ್ವಜನಿಕ ಬಳಕೆಗೆ ತೆರೆಯಲಾಗಿಲ್ಲ ಕೂಡಲೇ ರಸ್ತೆ ಮಧ್ಯದಲ್ಲಿರುವ ಕಸದ ತಿಪ್ಪೆ ಮತ್ತು ಟ್ರ್ಯಾಕ್ಟರ್ ಸಾಮಾನುಗಳನ್ನು ತೆರವುಗೊಳಿಸಬೇಕು 25 ಲಕ್ಷದಲ್ಲಿ ನಿರ್ಮಾಣವಾಗಿರುವ ಸ್ವಚ್ಛ ಭಾರತ ಶೌಚಾಲಯವನ್ನು ತಕ್ಷಣ ಸಾರ್ವಜನಿಕ ಬಳಕೆಗೆ, ವಿಶೇಷವಾಗಿ ಮಹಿಳೆಯರಿಗೆ ತೆರೆಯಬೇಕು , ಶೌಚಾಲಯಕ್ಕೆ ನೀರು, ಲೈಟ್ ಮತ್ತು ನಿರ್ವಹಣೆಯ ವ್ಯವಸ್ಥೆ ಮಾಡಬೇಕು , ಸರ್ಕಾರಿ ಹಣದ ದುರ್ವಿನಿಯೋಗವೂ ಆಗುತ್ತದೆ ಮತ್ತು ಸಾರ್ವಜನಿಕ ಆರೋಗ್ಯದ ಪ್ರಶ್ನೆಯೂ ಆಗಿದೆ. ಆದ್ದರಿಂದ 7 ದಿನಗಳ ಒಳಗೆ ಕ್ರಮ ಕೈಗೊಳ್ಳುವಂತೆ ಕೋರುತ್ತೇವೆ. ಇಲ್ಲವಾದಲ್ಲಿ ಗ್ರಾಮಸ್ಥರು ಸೇರಿ ಉನ್ನತ ಅಧಿಕಾರಿಗಳಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದರು . ಈ ಸಂದರ್ಭದಲ್ಲಿ ಮಹೇಶ ತೂಪದೂರ ,ನಾಗರಾಜ ಭೂವಿ , ಅಮರೇಶ ಹೆಚ್ ಆನೆಹೊಸೂರು ರಾಜು ಬಾವಿಮನಿ. ಸುದೀಪ್ ಕತ್ತಿ ಸೇರಿದಂತೆ ಇತರರು ಇದ್ದರು .

## ಮುದನೂರು ಕೆ. ಗ್ರಾ. ಪ. ಅಧಿಕಾರಿಗಳ ದುರುಪಯೋಗ ಆರೋಪ

❑ ನೈಜ್ಯ ದೆಸೆ ನ್ಯೂಸ್

**ಯಾದಗಿರಿ: ಜಿಲ್ಲೆಯ ಹುಣಸಗಿ ತಾಲೂಕಿನ ಮೂದನೂರು ಕೆ ಗ್ರಾಮ ಪಂಚಾಯತಿಯಲ್ಲಿ 15ನೇ ಹಣಕಾಸು ಯೋಜನೆಯ ಅನುದಾನವನ್ನು ಯಾವುದೇ ಕೆಲಸ ಮಾಡದೆ ಸಂಪೂರ್ಣವಾಗಿ ದುರುಪಯೋಗ ಕೊಡಿಸಲಾಗಿದೆ ಎಂಬ ದೂರಿನ ಹಿನ್ನೆಲೆಯಲ್ಲಿ.**

ಈ ಬಗ್ಗೆ ಸೂಕ್ತ ಪರಿಶೀಲನೆ ನಡೆಸಿ ನಿಯಮ ಅನುಸಾರ ಕ್ರಮ ಕೈಗೊಳ್ಳುವಂತೆ ಯಾದಗಿರಿ ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು(ಸಿಇಒ ) ಹುಣಸಿಗಿ ತಾಲೂಕಿನ ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾ-ರಿಗಳಿಗೆ(ಇಒ) ಇವರಿಗೆ ಸೂಚನೆ ನೀಡಿದ್ದಾರೆ. ಸುರಪುರ ತಾಲೂಕಿನ ಕೆಂಭಾವಿ ನಿವಾಸಿಯಾಗಿರು ತಕ್ಕಂತ ಶ್ರೀ. ಮರೆಪ್ಪ ಎಂ. ಕಟ್ಟಿಮನಿ ಎಂಬುವರ



ದೂರಿನ ಅನ್ವಯ ಈ ಕ್ರಮ ಜರಗಿಸಲಾಗಿದೆ. ಮೂದನೂರು ಕೆ. ಗ್ರಾಮ ಪಂಚಾಯತಿಯಲ್ಲಿ 2025–2026 ನೇ ಕುಡಿಯುವ ನೀರು ಹಾಗೂ ಒಳಚರಂಡಿ. ಬೀದಿ ದೀಪ. ಎಸ್ಸಿ.ಎಸ್‌ಟಿ ಮಕ್ಕಳಿಗೆ ಪುಸ್ತಕ ಖರೀದಿ ಮಾಡಲು ಬಂದಿರೋ ತಕ್ಕಂತ ಅನುದಾನವನ್ನು. ಯಾವುದೇ ಕೆಲಸ ಮಾಡದೆ.


ನಕಲಿ ದಾಖಲೆಗಳನ್ನು ಸೃಷ್ಟಿಸಿ. ಅಂಗಡಿಗಳಿಗೆ ನೇರವಾಗಿ ಹಣವನ್ನು ವರ್ಗಾವಣೆ ಮಾಡುವ ಮೂಲಕ ದುರುಪಯೋಗ ಪಡಿಸಿಕೊಂಡಿದ್ದಾರೆ. ಎಂದು ದೂರಿನಲ್ಲಿ ತಿಳಿಸಲಾಗಿತ್ತು. ಈ ವಿಷಯದ ಕುರಿತು ತನಿಖೆ ನಡೆಸಲು ಅಧಿಕಾ-ರಿಗಳು ಗ್ರಾಮ ಪಂಚಾಯಿತಿಗೆ ಭೇಟಿ ನೀಡಿದಾಗ. ಮುದನೂರ.ಕ್ಕೆ .ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ ಮತ್ತು ಮದನೂರು ಕೆ ಗ್ರಾಮ ಪಂಚಾಯಿತಿ ಅಕೌಂಟೆಂಟ್. ಯಾವುದೇ ದಾಖಲೆ ನೀಡದೆ ನಿರ್ಲಕ್ಷೆ. ಹಾಗೂ ಉಡ-ಾಫೆ ತೋರಿದ್ದಾರೆ ಎಂದು ಆರೋಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕರ್ತವ್ಯ ಲೋಪ ಅಧಿಕಾ-ರಿಗಳ ಮೇಲೆ ಶಿಸ್ತುಕ್ರಮ ಜರಗಿಸಿ. ಸೇವೆಯಿಂದ ವಜಗೊಳಿಸುವಂತೆ. ಅರ್ಜಿದಾರರು ಕೋರಿದ್ದರು. ಸದ್ಯವು ಈ ಪ್ರಕರಣದ ಕುರಿತು. ತಾಲೂಕು ಮಟ್ಟದಲ್ಲಿಯೇ ಸೂಕ್ತ ಕ್ರಮ ಕೈಗೊಂಡು ಅರ್ಜಿದಾರರಿಗೆ ಹಿಂಬರ ನೀಡಿ. ಈ ಪ್ರಕರಣದ ಕುರಿತು ಮಾನ್ಯ ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಣ ಅಧಿಕಾರಿಗಳು ಇದರ ವರದಿಯನ್ನು ಸೂಕ್ಷ್ಮವಾಗಿ ಪರಿಗಣಿಸಿ ನಮಗೆ ಹಿಂಬರವನ್ನು ಕಳಿಸಿ ಅಂತ ಹೇಳಿ ಆದ-ೇಶ ಮಾಡಿದ್ದಾರೆ. ಹೇಳಿದರು. ಆದರೆ ಇಲ್ಲಿಯವರೆಗೆ ಹುಣಸಗಿ ತಾಲೂಕು ಪಂಚಾಯಿತಿ ಕಾರ್ಯನಿರ್ವಣ ಅಧಿಕಾರಿಗಳು ಯಾವುದೇ ರೀತಿಯಿಂದ ಅರ್ಜಿ ಕೊಟ್ಟಿರುವ ತಂತದ್ಗಗ್ದುದ್ದು ಇರುವುದಿಲ್ಲ. ಕೂಡಲಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಧಿಕಾ-ರಿಗಳು ಇದರ ಬಗ್ಗೆ ಎಚ್ಚೆತ್ತುಕೊಳ್ಳಬೇಕು ಎಂದು ಅರ್ಜಿದಾರರು ಮನವಿಯನ್ನು ಮಾಡಿಕೊಂಡರು.

## ರಾಯಚೂರು ನಗರದ ವಿವಿಧ ವಾರ್ಡ್‌ಗಳಲ್ಲಿ ವೋಲ್ಟೇಜ್ ಸಮಸ್ಯೆ ಹಾಗೂ ವಿದ್ಯುತ್ ಕಂಬ ಅಳವಡಿಕೆಗೆ ಆಗ್ರಹಿಸಿ ಜೆಸ್ಕಾಂಗೆ AIMIM ಮನವಿ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ನಗರದ ವಾರ್ಡ್ ನಂ. 29ರ ಎಲ್.ಬಿ.ಎಸ್. ನಗರದಲ್ಲಿ ಕಳೆದ ಹಲವು ತಿಂಗಳುಗಳಿಂದ ಉಂಟಾಗಿರುವ ನಿರಂತರ ವೋಲ್ಟೇಜ್ ಏರಿಳಿತ ಸಮಸ್ಯೆ ಹಾಗೂ ವಾರ್ಡ್ ನಂ. 14ರ ಮಂಗಳವಾರ ಪೇಟೆಯಲ್ಲಿ ಹೊಸ ವಿದ್ಯುತ್ ಕಂಬ ಅಳವಡಿಸುವಂತೆ ಆಗ್ರಹಿಸಿ, ಆಲ್ ಇಂಡಿಯಾ ಮಜ್ಲಿಸ್–ಎ–ಇತ್ತೇಹಾದುಲ್ ಮುಸ್ಲಿಮೀನ್ (AIM-IM) ರಾಯಚೂರು ನಗರ ಘಟಕದ ಅಧ್ಯಕ್ಷ ಶಬ್ಬೀರ್ ಅಹ್ಮದ್ ಹೌದಾದಿ ನೇತೃತ್ವದಲ್ಲಿ ಜೆಸ್ಕಾಂ (GESCOM) ಕಾರ್ಯಾಚರಣೆ ಮತ್ತು ಪಾಲನೆ ನಗರ ಉಪವಿಭಾಗ–2ರ ಪ್ರಭಾರಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಗೆ ಮನವಿ ಸಲ್ಲಿಸಲಾಯಿತು.**

ಪ್ರಮುಖ ಸಮಸ್ಯೆಗಳು ವಾರ್ಡ್ ನಂ. 29 (ಎಲ್.ಬಿ.ಎಸ್. ನಗರ): ಈ ಪ್ರದೇಶದಲ್ಲಿ ಹಲವು ತಿಂಗಳುಗಳಿಂದ ವಿದ್ಯುತ್ ವೋಲ್ಟೇಜ್ ಪದೇ ಪದೇ ಏರಿಳಿತವಾಗುತ್ತಿದ್ದು, ಟಿವಿ, ಫ್ರಿಡ್ಜ್, ಬಲ್ಬ್ ಸೇರಿದಂತೆ




ಗೃಹೋಪಯೋಗಿ ವಿದ್ಯುತ್ ಉಪಕರಣಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಅನೇಕ ಮನೆಗಳಲ್ಲಿ ವಿದ್ಯುತ್ ಉಪಕರಣಗಳು ಸುಟ್ಟು ಹೋಗಿ ಸಾರ್ವಜನಿಕರಿಗೆ ಆರ್ಥಿಕ ನಷ್ಟ ಉಂಟಾಗುತ್ತಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ವಾರ್ಡ್ ನಂ. 14 (ಮಂಗಳವಾರ ಪೇಟೆ): ಈ ಪ್ರದೇಶದಲ್ಲಿ ಹೊಸ ವಿದ್ಯುತ್ ಕಂಬ (ಪೋಲ್) ಅಳವಡಿಸುವುದು ತುರ್ತು ಅಗತ್ಯವಾಗಿದ್ದು, ಸಾರ್ವಜನಿಕರ ಸುರಕ್ಷತೆ ಹಾಗೂ ನಿರಂತರ ವಿದ್ಯುತ್ ಪೂರೈಕೆಯ ದೃಷ್ಟಿಯಿಂದ ಕೂಡಲೇ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲಾಗಿದೆ.

ಟ್ರಾನ್ಸ್‌ಫಾರ್ಮರ್‌ಗೆ ಅಪಾಯ ಮಂಗಳವಾರ ಪೇಟೆಯಲ್ಲಿರುವ ಟ್ರಾನ್ಸ್‌ಫಾರ್ಮರ್ ಹಾಗೂ ವಿದ್ಯುತ್ ಕಂಬವನ್ನು ಬೇವಿನ ಗಿಡ ಸಂಪೂರ್ಣವಾಗಿ ಆವರಿಸಿಕೊಂಡಿರುವುದರಿಂದ ಪದೇ ಪದೇ ವಿದ್ಯುತ್ ವ್ಯತ್ಯಯ ಉಂಟಾಗುತ್ತಿದೆ. ಈ ಪರಿಸ್ಥಿತಿ ಮುಂದುವರಿದರೆ ಟ್ರಾನ್ಸ್‌ಫಾರ್ಮರ್ ಸುಟ್ಟು ಹೋಗುವ ಅಪಾಯವಿದ್ದು, ಜೆಸ್ಕಾಂಗೆ ಅನಗತ್ಯ ಆರ್ಥಿಕ ಹೊರೆ ಉಂಟಾಗುವ ಸಾಧ್ಯತೆ ಇದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ವೋಲ್ಟೇಜ್ ಸಮಸ್ಯೆ ನಿವಾರಣೆ, ಅಗತ್ಯ ದುರಸ್ತಿ ಕಾರ್ಯ, ಬೇವಿನ ಗಿಡ ತೆರವು ಹಾಗೂ ಹೊಸ ವಿದ್ಯುತ್ ಕಂಬ ಅಳವಡಿಕೆ ಸೇರಿದಂತೆ ಅಗತ್ಯ ಕ್ರಮಗಳನ್ನು ಶೀಘ್ರ ಕೈಗೊಳ್ಳುವಂತೆ ಂಋಒಋಒ ಮುಖಂಡರು ಆಗ್ರಹಿಸಿದರು.

ಹಾಜರಿದ್ದ ಪ್ರಮುಖರು ಶಬ್ಬೀರ್ ಅಹ್ಮದ್ ಹೌದಾದಿ AIMIM ರಾಯಚೂರು ನಗರ ಅಧ್ಯಕ್ಷರು, ಶಹಬಾಜ್ ಖಾನ್ ನಗರ ಕಾರ್ಯದರ್ಶಿ, ಸಂತೋಷ್ ಸೂರ್ಯವಂಶಿ ನಗರ ಜಂಟಿ ಕಾರ್ಯದರ್ಶಿ, ತನ್ವೀರ್ ಅಹ್ಮದ್ ಖಾನ್ ನಗರ ಜಂಟಿ ಕಾರ್ಯದರ್ಶಿ, ಈರಣ್ಣ ಬೋವಿ ನಗರ ಕಾರ್ಯಕಾರಿ ಸದಸ್ಯ, ಸುಂಕದ್ ಇರ್ಫಾನ್ ಖಾನ್ ನಗರ ಜಂಟಿ ಕಾರ್ಯದರ್ಶಿ, ಸೊಹೇಲ್ ಕುರೇಶಿ ಅಧ್ಯಕ್ಷರು, ವಾರ್ಡ್ ನಂ. 14.

# ನೇಮಕಾತಿ ಪ್ರಕಟಣೆ

**KIMS ಬೆಂಗಳೂರು ನೇಮಕಾತಿ 2026 ? 27 ಟೆಕ್ನೀಷಿಯನ್ ಮತ್ತು ರೆಕಾರ್ಡ್ ಕ್ಲರ್ಕ್ ಹುದ್ದೆಗಳಿಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಜುಲೈ 18, 2026 ।**

KIMS ಬೆಂಗಳೂರು ನೇಮಕಾತಿ 2026: 27 ಟೆಕ್ನೀಷಿಯನ್ ಮತ್ತು ರೆಕಾರ್ಡ್ ಕ್ಲರ್ಕ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕೆಂಪೇಗೌಡ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ (KIMS) ಬೆಂಗಳೂರು, ಜುಲೈ 2026ರ ಅಧಿಕೃತ ಅಧಿಸೂಚನೆಯ ಮೂಲಕ ಟೆಕ್ನೀಷಿಯನ್ ಮತ್ತು ರೆಕಾರ್ಡ್ ಕ್ಲರ್ಕ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನಲ್ಲಿ ಅಥವಾ ಕರ್ನಾಟಕ ಸರ್ಕಾರದಲ್ಲಿ ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 22-ಜುಲೈ-2026 ರೊಳಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: kimsbangalore.edu.in

## ಜಾಲಹಳ್ಳಿ ವಾರ್ಡ್ ನಂ. 1 ಮತ್ತು 9ರಲ್ಲಿ ಮೂಲಸೌಕರ್ಯ ಕಲ್ಪಿಸಲು ಕರವೇ ಆಗ್ರಹ; ಗ್ರಾ.ಪಂ.ಗೆ ಮನವಿ

ನೈಜ್ಯ ದೆಸೆ ನ್ಯೂಸ್



**ಜಾಲಹಳ್ಳಿ: ದೇವದುರ್ಗ ತಾಲ್ಲೂಕಿನ ಜಾಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಾರ್ಡ್ ನಂ. 1 ಮತ್ತು 9ರಲ್ಲಿ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸುವಂತೆ ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ (ಕರವೇ) ತಾಲ್ಲೂಕು ಹಾಗೂ ಹೋಬಳಿ ಘಟಕದ ಪದಾಧಿಕಾರಿಗಳು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಕಆಔ) ಅವರಿಗೆ ಮನವಿ ಸಲ್ಲಿಸಿದರು.**

ವಾರ್ಡ್ ನಂ. 9ರಲ್ಲಿ ಜೀರ್ಣಾವಸ್ಥೆಯಲ್ಲಿರುವ ಮಹಿಳೆಯರ ಸಾರ್ವಜನಿಕ ಶೌಚಾಲಯವನ್ನು ತೆರವುಗೊಳಿಸಿ ನೂತನ ಶೌಚಾಲಯ ನಿರ್ಮಿಸಬೇಕು. ವಾರ್ಡ್ ನಂ. 1ರ ವಾಲ್ಮೀಕಿ ಸರ್ಕಲ್ ಸಮೀಪದ ಬಸ್ ನಿಲ್ದಾಣವನ್ನು ದುರಸ್ತಿಗೊಳಿಸಬೇಕು ಎಂದು ಆಗ್ರಹಿಸಿದರು.

ಅದೇ ರೀತಿ, ವಾರ್ಡ್ ನಂ. 1 ಮತ್ತು 9ರಲ್ಲಿ ಚರಂಡಿಗಳು ತುಂಬಿಕೊಂಡು ಮಲಿನ ನೀರು ರಸ್ತೆಯ ಮೇಲೆ ಹರಿಯುತ್ತಿದ್ದು, ಸೊಳ್ಳೆಗಳ ಕಾಟ ಹೆಚ್ಚಾಗಿದೆ. ಇದರಿಂದ ಸಾಂಕ್ರಾಮಿಕ ರೋಗಗಳ ಭೀತಿ ಎದುರಾಗಿರುವ ಹಿನ್ನೆಲೆಯಲ್ಲಿ ಕೂಡಲೇ ಚರಂಡಿಗಳನ್ನು ಸ್ವಚ್ಛಗೊಳಿಸಬೇಕು ಎಂದು ಒತ್ತಾಯಿಸಿದರು.

ಶಾಂತೇಶ್ವರ ನಗರದಲ್ಲಿ ವಿದ್ಯುತ್ ಕಂಬಗಳಿಗೆ ಬೀದಿ ದೀಪಗಳನ್ನು ಅಳವಡಿಸಬೇಕು. ವಿಕಲಚೇತನರಿಗಾಗಿ ಮೀಸಲಾಗಿರುವ ಬಳಕೆಯಾಗದೆ ಉಳಿದಿರುವ ಅನುದಾನವನ್ನು ಅರ್ಹ ಫಲಾನುಭವಿಗಳಿಗೆ ಶೀಘ್ರವಾಗಿ ವಿತರಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ. ಗ್ರಾಮಸ್ಥರ ಮೂಲಭೂತ ಸಮಸ್ಯೆಗಳನ್ನು ಪಂಚಾಯಿತಿ ಆಡಳಿತ ನಿರ್ಲಕ್ಷಿಸಿದರೆ, ಗ್ರಾಮ ಪಂಚಾಯಿತಿ ಕಾರ್ಯಾಲಯದ ಮುಂದೆ ಕರವೇ ತಾಲ್ಲೂಕು ಹಾಗೂ ಹೋಬಳಿ ಘಟಕದ ವತಿಯಿಂದ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಪದಾಧಿಕಾರಿಗಳು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಕರವೇ ತಾಲ್ಲೂಕು ಅಧ್ಯಕ್ಷ ನಂದಪ್ಪ ಪಿ. ಮುಡ್ಡಿ, ತಾಲ್ಲೂಕು ಸಂಚಾಲಕ ಭೀಮಣ್ಣ ನಾಯಕ, ಪ್ರಧಾನ ಕಾರ್ಯದರ್ಶಿ ಗುರುನಾಥ ರೆಡ್ಡಿ ಎಂ., ಜಾಲಹಳ್ಳಿ ಹೋಬಳಿ ಅಧ್ಯಕ್ಷ ತಮ್ಮಣ್ಣ ಹೇರುಂಡಿ, ವಿಕಲಚೇತನ ಘಟಕದ ಅಧ್ಯಕ್ಷ ಭೀಮರಾಯ ಮುಕಾಶಿ, ಉಪಾಧ್ಯಕ್ಷ ವೆಂಕಟೇಶ್ ಜಗಕಲ್, ಕರವೇ ಯುವ ಘಟಕದ ಅಧ್ಯಕ್ಷ ಮಲ್ಲು ತೆಗ್ಗಳ್ಳಿ, ರಂಗಪ್ಪ ಬಂಡಿ, ಅಮರೇಶ ಪಾಟೀಲ್, ಮಾಜಿ ಸದಸ್ಯರಾದ ಚನ್ನಪ್ಪ, ಹುಲಿಗೆಪ್ಪ, ರಮೇಶ ಭಜಂತ್ರಿ, ಈಶಪ್ಪ ಮಡಿವಾಳ, ನಿಂಗಪ್ಪ ಮಡಿವಾಳ, ರಾಘವೇಂದ್ರ ಮೋದಿ, ಉಮೇಶ ಮೋದಿ, ರಮೇಶ ಕುರುಬರ, ದುರಗನಗೌಡ ಅಗಸಿಮನಿ, ರಮೇಶ್ ಲಿಂಗದಳ್ಳಿ, ದುರ್ಗಪ್ಪ ನಾಯಕ್ ಸೇರಿದಂತೆ ಸಂಘಟನೆಯ ವಿವಿಧ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಕರ್ನಾಟಕಕ್ಕೆ ಅಮೃತ ಭಾರತ ಎಕ್ಸ್ ಪ್ರೆಸ್ ಟ್ರೈನ್ ಅಗತ್ಯತೆ ಇದೆ: ಡಾ. ಬಾಬುರಾವ್

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಕರ್ನಾಟಕ ರಾಜ್ಯಕ್ಕೆ ಅಮೃತ ಭಾರತ ಎಕ್ಸ ಪ್ರೆಸ್ ಟ್ರೈನ್ ಅಗತ್ಯತೆ ಇದ್ದು ರೈಲ್ವೆ ಸಚಿವ ಅಶ್ವಿನ್ ವೈಷ್ಣವಿ ಹಾಗೂ ರಾಜ್ಯ ಖಾತೆ ರೈಲ್ವೆ ಸಚಿವ ವಿ. ಸೋಮಣ್ಣ ಅವರುಗಳು ಈ ಬೇಡಿಕೆಯನ್ನು ಪರಿಗಣಿಸಬೇಕೆಂದು ಕರ್ನಾಟಕದ ಜನತೆಯ ಪರವಾಗಿ ಎಂದು ರೈಲ್ವೆ ಸಲಹಾ ಸಮಿತಿ ಮಾಜಿ ಸದಸ್ಯ ಡಾ. ಬಾಬುರಾವ್ ಮನವಿ ಮಾಡಿದ್ದಾರೆ.**



ರಾಜ್ಯದ ದಕ್ಷಿಣ ತುದಿ ಚಾಮರಾಜನಗರದಿಂದ ಉತ್ತರದ ತುತ್ತತುದಿ ಬೀದರ್ ವರೆಗೆ ಈ ಅಮೃತ ಭಾರತ ಎಕ್ಸ್ ಪ್ರೆಸ್ ಟ್ರೈನ್ ಸಂಚರಿಸುವಂತೆ ಮಾರ್ಗಸೂಚಿ ಅನುಸರಿಸಬೇಕು. ಹೀಗಾದಲ್ಲಿ ಚಾಮರಾಜನಗರ, ಮೈಸೂರು, ಮಂಡ್ಯ,ಬೆಂಗಳೂರು, ಯಲಹಂಕ, ಹಿಂದೂಪುರ, ಧರ್ಮಾವರಂ, ಗುಂತಕಲ್, ರಾಯಚೂರು, ಯಾದಗಿರಿ, ಕಲಬುರಗಿ, ಬೀದರ್ ಗಳಿಗೆ ಒಂದೇ ಟ್ರೈನ್ ನಿಂದ ಸಂಪರ್ಕ ದೊರೆತಂತಾಗುತ್ತದೆ. ಈ ರೈಲು ಸೌಲಭ್ಯದಿಂದ ವಿದ್ಯಾರ್ಥಿಗಳಿಗೆ, ಕುಟುಂಬಗಳಿಗೆ, ಪ್ರವಾಸಿಗರಿಗೆ ಉದ್ಯೋಗಿಗಳಿಗೆ ನೇರ ಪ್ರಯಾಣದ ಅವಕಾಶ ದೊರೆತಂತಾಗುತ್ತದೆ. ಶಿಕ್ಷಣ, ಉದ್ಯೋಗ, ವ್ಯಾಪಾರ ಹಾಗೂ ಪ್ರವಾಸೋದ್ಯಮಕ್ಕೆ ಉತ್ತೇಜನ ದೊರೆತಂತಾಗುತ್ತದೆ. ಇದಲ್ಲದೆ ಈ ರೈಲು ಸಂಚಾರದಿಂದ ದಕ್ಷಿಣ ಮೈಸೂರು ಭಾಗ ಹಾಗೂ ಕಲ್ಯಾಣ ಕರ್ನಾಟಕದ ಭಾಗಗಳೆರಡಕ್ಕೂ ಅನುಕೂಲವಾದಂತಾಗುತ್ತದೆ. ಹಲವು ರೈಲುಗಳನ್ನು ಬದಲಾಯಿಸಿ ಪ್ರಯಾಣಿಸುವ ಪ್ರಯಾಸಕ್ಕೂ ಬ್ರೇಕ್ ಬೀಳಲಿದೆ. ಆದ್ದರಿಂದ ರೈಲ್ವೆ ಸಚಿವರು ಈ ಬೇಡಿಕೆಯನ್ನು ಪರಿಗಣಿಸಬೇಕೆಂದು ಅವರು ಮನವಿ ಮಾಡಿದ್ದಾರೆ.

## ಸಚಿವ ರಾಮಲಿಂಗಾರೆಡ್ಡಿಗೆ ಗೌರವ ಸಮರ್ಪಣೆ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಕರ್ನಾಟಕ ರಾಜ್ಯ ಜಲಸಂಪನ್ಮೂಲ ಸಚಿವರು ಹಾಗೂ ಬೆಂಗಳೂರು ದಕ್ಷಿಣ ಮತ್ತು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ರಾಮಲಿಂಗಾರೆಡ್ಡಿ ಅವರು ಮಂಗಳವಾರ ಮುದ್ದೇಬಿಹಾಳ ಪಟ್ಟಣಕ್ಕೆ ಆಗಮಿಸಿದ ಸಂದರ್ಭದಲ್ಲಿ ಅವರನ್ನು ತಾಳಿಕೋಟಿ ಭಾಗದ ಮುಖಂಡರು ಅವರ ಭಾವಚಿತ್ರವನ್ನು ನೀಡಿ ಸನ್ಮಾನಿಸಿ ಗೌರವ ಸಮರ್ಪಣೆ ಸಲ್ಲಿಸಿದರು.**




ಈ ಸಮಯದಲ್ಲಿ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷರು ಹಾಗೂ ಮುದ್ದೇಬಿಹಾಳ ಮತಕ್ಷೇತ್ರ ಶಾಸಕರಾದ ಸಿ.ಎಸ್.ನಾಡಗೌಡ(ಅಪ್ಪಾಜಿ), ಮುಖಂಡರಾದ ರಾಜುಗೌಡ ಪಾಟೀಲ ವಜ್ಜಲ್, ಶರಣುಧಣಿ ದೇಶಮುಖ, ಶ್ರೀಕಾಂತಗೌಡ ಪಾಟೀಲ, ಶರಣಗೌಡ ನಾಗರೆಡ್ಡಿ(ಬಂಟನೂರ), ಸಂಗನಗೌಡ ಅಸ್ಕಿ, ಕೆಬಿಜೆಎನ್‌ಎಲ್ ಆಲಮಟ್ಟಿ ಅರಣ್ಯ ವಿಭಾಗದ ಅಧಿಕಾರಿ ಪಾಟೀಲ ಮತ್ತಿತರರು ಇದ್ದರು.

## ಸೋಮಲಾಪುರ ಗ್ರಾಮದಲ್ಲಿ ವಿಎಚ್‌ಎನ್‌ಡಿ ಕಾರ್ಯಕ್ರಮ: ಆರೋಗ್ಯ ಸೇವೆಗಳ ಸದ್ಬಳಕೆಗೆ ಕರೆ



ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಷ್ಟ್ರೀಯ ಆರೋಗ್ಯ ಅಭಿಯಾನ (ಅಡಿಯಲ್ಲಿ ಸಾಲಗುಂದ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಸೋಮಲಾಪುರ ಗ್ರಾಮದಲ್ಲಿ ಗ್ರಾಮ ಆರೋಗ್ಯ, ಸ್ವಚ್ಛತೆ ಮತ್ತು ಪೌಷ್ಟಿಕತೆ ದಿನ (ವಿಹೆಚ್‌ಎನ್‌ಡಿ) ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು.**

ಕಾರ್ಯಕ್ರಮದಲ್ಲಿ ರಾಯಚೂರು ಜಿಲ್ಲಾ ಕಾರ್ಯಕ್ರಮ ಸಂಯೋಜಕರು? ಸಮುದಾಯ ಮೇಲ್ವಿಚಾರಣೆ ಹಾಗೂ ಕ್ಲಸ್ಟರ್ ಪ್ರಿವೆನ್ಷನ್ ಅಧಿಕಾರಿ ಶ್ರೀ ಬಸವರಾಜಪ್ಪಗೌಡ ಅವರು ಭಾಗವಹಿಸಿ, ಗರ್ಭಿಣಿಯರು, ಬಾಣಂತಿಯರು ಹಾಗೂ ಮಕ್ಕಳ ಪೋಷಕರಿಗೆ ತಾಯಿ ಮತ್ತು ಶಿಶು ಆರೋಗ್ಯ, ಸಂಪೂರ್ಣ ಲಸಿಕಾಕರಣ, ಪೌಷ್ಟಿಕ ಆಹಾರ, ವೈಯಕ್ತಿಕ ಸ್ವಚ್ಛತೆ, ಸಾಂಕ್ರಾಮಿಕ ರೋಗಗಳ ತಡೆ ಹಾಗೂ ಆರೋಗ್ಯ ಸೇವೆಗಳ ಸದುಪಯೋಗದ ಕುರಿತು ಅರಿವು ಮೂಡಿಸಿದರು.

ಈ ಸಂದರ್ಭದಲ್ಲಿ ಶ್ರೀ ಗುರುಪ್ರಸಾದ್, ಫ್ಲೋರೋಸಿಸ್ ಸಲಹೆಗಾರರು, ರಾಯಚೂರು ಅವರು ಭಾಗವಹಿಸಿ, ಫ್ಲೋರೋಸಿಸ್ ತಡೆಗಟ್ಟುವಿಕೆ, ಸುರಕ್ಷಿತ ಕುಡಿಯುವ ನೀರಿನ ಬಳಕೆ, ಮಕ್ಕಳಲ್ಲಿ ಮತ್ತು ಸಾರ್ವಜನಿಕರಲ್ಲಿ ಫ್ಲೋರೋಸಿಸ್ ಲಕ್ಷಣಗಳ ಬಗ್ಗೆ ಜಾಗೃತಿ ಹಾಗೂ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಹಿ.ಪ್ರಾ.ಆ.ಸುರಕ್ಷಣಾಧಿಕಾರಿ ಕಸ್ತೂರಿ, ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿಗಳು, ರಡ್ಡೆಪ್ಪಗೌಡ ಸಮುದಾಯ ಆರೋಗ್ಯ ಅಧಿಕಾರಿಗಳು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ಆರೋಗ್ಯ ಇಲಾಖೆಯ ಸಿಬ್ಬಂದಿ ಹಾಗೂ ಗ್ರಾಮಸ್ಥರು ಸಕ್ರಿಯವಾಗಿ ಪಾಲ್ಗೊಂಡರು. ಸಾರ್ವಜನಿಕರು ಆರೋಗ್ಯ ಇಲಾಖೆಯ ಸೇವೆಗಳನ್ನು ಸಮರ್ಪಕವಾಗಿ ಬಳಸಿಕೊಂಡು ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಸಹಕರಿಸುವಂತೆ ಅಧಿಕಾರಿಗಳು ಕರೆ ನೀಡಿದರು.

## ಅಂಧ-ಅನಾಥರ ಬದುಕಿನ ಮಧ್ಯೆ ಬದುಕು ಕಟ್ಟಿಕೊಂಡಿರುವ
## ಅನಾಥರ ಆರಾಧ್ಯ ದೈವ ಡಾ. ಚನ್ನಬಸವ ಸ್ವಾಮಿ ಹಿರೇಮಠ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ) ಹರೇಟನೂರು ಎನ್ನುವ ಸಂಸ್ಥೆಯನ್ನು ಕಾನೂನಾತ್ಮಕವಾಗಿ ಹುಟ್ಟು ವಾಕಿ ಈ ಟ್ರಸ್ಟ್ ಅಡಿಯಲ್ಲಿ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮವನ್ನು ಸ್ಥಾಪಿಸಿ ಈ ಸಂಸ್ಥೆಗೆ ತಮ್ಮ ಪಿತೋಶ್ರೀಗಳಾದ ವೇದಮೂರ್ತಿ ಅಮರಯ್ಯ ಸ್ವಾಮಿಯವರನ್ನು ಸಂಸ್ಥಾಪಕ ಅಧ್ಯಕ್ಷರನ್ನಾಗಿಸಿ ಉಳಿದಂತೆ**

ಊರ ಗ್ರಾಮಸ್ಥರನ್ನು ಪದಾಧಿಕಾರಿಗಳನ್ನಾಗಿ ನೇಮಿಸಿ ಕಲ್ಯಾಣ ಕರ್ನಾಟಕದಲ್ಲಿ ಅನಾಥಾಶ್ರಮ ವೃದ್ಧಾಶ್ರಮ ಎಂದರೇನು? ಅಲ್ಲಿನ ಸ್ಥಿತಿ ಅಲ್ಲಿನ ಅನಾಥರ ಬದುಕು ಹೇಗಿರುತ್ತದೆ. ನೊಂದ ಜೀವಿಗಳಿಗೆ ನಾಡಿಮಿಡಿತವಾಗಿ ಮಾದವನ ಸೇವೆಯೇ ಮಾನವ ಸೇವೆ ಎನ್ನುವ ಮನೋಭಾವನೆಯನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡಿರುವ ಕರುನಾಡಿನ ಕಾರುಣ್ಯ ಮೂರ್ತಿಗಳಾದ ಡಾ. ಚನ್ನಬಸಯ್ಯಸ್ವಾಮಿ ಹಿರೇಮಠ ಅವರಿಗೆ 46ನೇ ವಸಂತದ ಸಾರ್ಥಕ ದಿನ. ನಾನು ನನ್ನದು ನನ್ನಿಂದಲೇ ನಾನೇ ಎಲ್ಲ ಎನ್ನುವ ಈ ಸ್ವಾರ್ಥ ಜಗತ್ತಿನಲ್ಲಿ ನನ್ನದೇನು ಅಲ್ಲ ನಾನ್ಯಾರು ಅಲ್ಲ ಅನಾಥರ ಬದುಕಲ್ಲಿ ಬದುಕು ಕಟ್ಟಿಕೊಂಡವ ನಾನು ನನ್ನ ತಂದೆ ತಾಯಿಗಳ ಮಾರ್ಗದರ್ಶನ ಆದರ್ಶ ವ್ಯಕ್ತಿತ್ವ ಮತ್ತು ನನ್ನ ಹುಟ್ಟೂರಿನ ಗುರು ಹಿರಿಯರುಗಳ ಆಶೀರ್ವಾದ ನನ್ನ ನಿರಂತರ ಜೋಳಿಗೆಯ ಕಾಯಕವೇ ನನಗೆ ಬಹು ದೊಡ್ಡ ಆಸ್ತಿ ಅನಾಥರೆಂದರೆ ಎಲ್ಲವೂ ಇದ್ದು ಸಹ ಏನು ಮಾಡಲಾರದೆ ಸಮಾಜಕ್ಕೆ ಯಾವುದೇ ಕೊಡುಗೆ



**ನಾನು ನನ್ನದು ನನ್ನಿಂದಲೇ ನಾನೇ ಎಲ್ಲ ಎನ್ನುವ ಈ ಸ್ವಾರ್ಥ ಜಗತ್ತಿನಲ್ಲಿ ನನ್ನದೇನು ಅಲ್ಲ ನಾನ್ಯಾರು ಅಲ್ಲ ಅನಾಥರ ಬದುಕಲ್ಲಿ ಬದುಕು**

ನೀಡಲಾರದೆ ಬರೀ ಟೀಕೆ ಟಿಪ್ಪಣಿ ಅವಮಾನ ಅಪಪ್ರಚಾರಗಳನ್ನು ಮಾಡುವಂತಹ ಮನುಷ್ಯರೇ ನಿಜವಾದ ಅನಾಥರು. ಸುಮಾರು ವರ್ಷಗಳ ಹಿಂದೆ ಆಶ್ರಮದ ಉದ್ದೇಶ ಧ್ಯೇಯೋದ್ದೇಶ ಸಂಕಲ್ಪವನ್ನು ಪ್ರತಿಯೊಂದು ಮನೆಗೆ ತಿಳಿಸಿ ಅವರು ನೀಡಿರುವ ದವಸ ಧಾನ್ಯ ಹಣವನ್ನು ಅನಾಥರಿಗಾಗಿ ಉಪಯೋಗಿಸುತ್ತಾ ನನ್ನ ಬದುಕನ್ನು ಕೂಡ ಅವರಲ್ಲಿ ಕಂಡುಕೊಂಡೆನು. ನನ್ನ ತಂದೆ ಹರೇಟನೂರು ಗ್ರಾಮದ ಆದಿಶಕ್ತಿ ಶ್ರೀ ದ್ಯಾವಮ್ಮ ದೇವಿಯ ಅರ್ಚಕನಾಗಿ ಆ ತಾಯಿಯ ಮಂಗಳಾರತಿ ತಟ್ಟೆ ದವಸ ಧಾನ್ಯಗಳನ್ನು ಸಮಾಜದಲ್ಲಿನ ನೊಂದ ಜೀವಿಗಳಿಗೆ ಅನಾಥ ಜೀವಿಗಳಿಗೆ ಉಪಯೋಗವಾಗಲಿ ಎನ್ನುವ ಉದ್ದೇಶವನ್ನಿಟ್ಟುಕೊಂಡ ಅವರ ಆಸೆಯನ್ನು ಈಡೇರಿಸಿದ ಆತ್ಮತೃಪ್ತಿ ನನಗಿದೆ.

ಪ್ರಥಮ ಹಂತದಲ್ಲಿ ಕಾರುಣ್ಯ ಕುಟುಂಬವನ್ನು ನಾನು ಮಂಜುನಾಥ ಭಂಗಿ ಹುಟ್ಟು ಹಾಕಿದ್ದು. ಬರು ಬರುತ್ತಾ ಜನರಲ್ಲಿ ಅನಾಥ ಸೇವಾ ಮನೋಭಾವನೆಯನ್ನು ಹುಟ್ಟು ಹಾಕಿ ದಾನಿಗಳ ಸಹಾಯಕ ಸಹಕಾರದೊಂದಿಗೆ ಕಾರುಣ್ಯ ಕುಟುಂಬವನ್ನು ಕಟ್ಟಿದೆನು. ಆದರೆ ಈ ಕಾರುಣ್ಯ ಆಶ್ರಮದ ಸೇವಾ ಕಾರ್ಯದ ದಿನಗಳಲ್ಲಿ ಹಲವಾರು ಜನ ನನ್ನ ಜೊತೆ ಕೈಗೂಡಿಸಿದರು. ಅದರಲ್ಲಿ ಕೆಲವರು ನನ್ನನ್ನು ಬಿಟ್ಟು ಹೋಗಿ ಹಲವಾರು ಸಮಾಜ ಸೇವಕಾರ್ಯಗಳನ್ನು ಮಾಡುತ್ತಿದ್ದಾರೆ. ಅವರ ಸೇವಾ ಕಾರ್ಯಗಳು ನನಗೆ ಮತ್ತು ನನ್ನ ಕಾರುಣ್ಯ ಕುಟುಂಬಕ್ಕೆ ಬಹು ಸಂತೋಷ ತಂದುಕೊಟ್ಟಿವೆ. ನಾನು ಪ್ರತಿಯೊಬ್ಬರ ಹತ್ತಿರ ಕೃತಜ್ಞತಾ ಭಾವನೆಯಿಂದ ಕೈ ಕಾಲು ಮುಗಿದು ಸಹಾಯ ಕೇಳಿದ್ದೇನೆ.

ಆದರೆ ಸಹಾಯ ಮಾಡಿದ ಎಲ್ಲಾ ದಾನಿಗಳ ನಂಬಿಕೆ ಪ್ರೀತಿ ವಿಶ್ವಾಸ ಉಳಿಸಿಕೊಂಡಿದ್ದೇನೆ ಎನ್ನುವ ಆತ್ಮತೃಪ್ತಿ ನನಗಿದೆ. ತಂದೆ ತಾಯಿಗಳು ಮಕ್ಕಳು ಸರ್ಕಾರಿ ನೌಕರಿ ಮತ್ತು ಸಂಪಾದನೆ ಮಾಡಿ ಸುಖವಾಗಿರಬೇಕು ಎಂದು ಹಲವಾರು ಕಷ್ಟಗಳ ಮಧ್ಯೆ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸುತ್ತಾರೆ.

ಆದರೆ ಯಾವೊಬ್ಬ ತಂದೆ ತಾಯಿಗಳು ಕೂಡ ನನ್ನ ಮಗ ಅಥವಾ ಮಗಳು ಬುದ್ಧ ಬಸವ ಅಂಬೇಡ್ಕರ್ ಅಬ್ದುಲ್ ಕಲಾಂ ಮದರ್ ತೆರೇಸಾ ಇವರುಗಳಂತೆ ಆಗಲಿ ಎನ್ನುವ ಆಸೆ ಪಡದೆ. ಮಕ್ಕಳಿಗೆ ಬಹುದೊಡ್ಡ ಮಟ್ಟದ ಶಿಕ್ಷಣವನ್ನು ಕೊಡಿಸಿ ಕೊನೆಗೆ ನಮ್ಮಂತಹ ವೃದ್ಧಾಶ್ರಮಗಳಲ್ಲಿ ಬದುಕು ಕಳೆಯುವಂತಹ ಅದೆಷ್ಟೋ ತಂದೆ ತಾಯಿಗಳನ್ನು ನಾವು ದಿನಾಲು ನೋಡುತ್ತಿದ್ದೇವೆ. ಆದರೆ ನನ್ನ 46ವಸಂತಗಳ ಬದುಕಿನ ಪಯಣದಲ್ಲಿ ನನ್ನ ಬಗ್ಗೆ ಟಿ. ಕೆ.ಟಿಪ್ಪಣಿ ಅಪಪ್ರಚಾರ ಅವಮಾನ ಮಾಡುವ ಮನಸ್ಸುಗಳೇ ನನ್ನ ಈ ಸೇವೆಗೆ ಸ್ಫೂರ್ತಿ.

ಸಂಸಾರದ ಜಂಜಾಟದಲ್ಲಿ ಹಿರಿಯರನ್ನು ಮನೆಯಿಂದ ಹಾಕುವಂತಹ ಕುಟುಂಬಗಳಿಗೆ ಬುದ್ಧಿವಾದ ಹೇಳಿ ಪುನಹ ಅವರ ಮನೆಗೆ ಹಿರಿಯರನ್ನು ಮತ್ತು ವಯಸ್ಕರ ಬುದ್ಧಿಮಾಂದ್ಯರನ್ನು ಸೇರಿಸುವ ದೊಡ್ಡ ಪ್ರಯತ್ನಕ್ಕೆ ಕೈ ಹಾಕಿದ ನಾನು ಆ ಪ್ರಯತ್ನದಿಂದ ಹಲವಾರು ಕುಟುಂಬಗಳು ಕೂಡ ತಂದೆ ತಾಯಿಗಳನ್ನು ಮತ್ತು ವಯಸ್ಕರ ಬುದ್ಧಿಮಾಂದರನ್ನು ಪ್ರೀತಿಸಿ ಪೂಜಿಸುತ್ತಾ ನನಗೆ ಧನ್ಯವಾದಗಳು ಹೇಳುವ ಆ ಸಂದರ್ಭ ನನ್ನ ಜನ್ಮ ಸಾರ್ಥಕ ದಿನವಾಗಿದೆ. ಸಿಂಧನೂರಲ್ಲದೆ ರಾಜ್ಯದ ಅನೇಕ ಗಣ್ಯರು ಹರ-ಗುರು ಚರ ಮೂರ್ತಿಗಳು ಬಸವಾದಿ ಶರಣರು ಮತ್ತು ಸೇವಾ ಸಂಸ್ಥೆಗಳು ಆಶ್ರಮಕ್ಕೆ ಭೇಟಿ ನೀಡಿ ಮಾರ್ಗದರ್ಶನ ನೀಡುತ್ತಾ ಈ ಕಾರುಣ್ಯ ಕುಟುಂಬವನ್ನು ಮುನ್ನಡೆಸುತ್ತಿದ್ದಾರೆ.

ತಮ್ಮೆಲ್ಲರ ಹರಕೆ ಹಾರೈಕೆ ಆಶೀರ್ವಾದದೊಂದಿಗೆ ಮಾಡುತ್ತಿರುವ ನನ್ನ ಈ ಸೇವೆಯು ಸೇವೆಯಲ್ಲ ಇದು ನನ್ನ ಕರ್ತವ್ಯ ಏಕೆಂದರೆ ನಾನು ಅನಾಥರ ಮಧ್ಯ ಬದುಕುತ್ತಿದ್ದು ಅವರ ಭಿಕ್ಷೆಯಲ್ಲಿಯೇ ನಾನು ಬದುಕು ಕಟ್ಟಿಕೊಂಡಿದ್ದೇನೆ. ತಾವುಗಳು ಮಾಡುವ ಸಹಾಯ ಸಹಕಾರ ಬರಿ ಆಶ್ರಮದ ಆಶ್ರಯದಾತರುಗಳಿಗಲ್ಲದೆ ನಾನು ನನ್ನ ಧರ್ಮಪತ್ನಿ ನನ್ನಿಬ್ಬರು ಮಕ್ಕಳಿಗೆ ತಾವುಗಳು ಹಸಿವು ನೀಗಿಸುತಿದ್ದೀರಿ.

ನನ್ನ ಒಳಬಳ್ಳಾರಿಯ ಸುವರ್ಣಗಿರಿ ವಿರಕ್ತಮಠದ ಶ್ರೀ ಮ. ನಿ. ಪ್ರ.ಡಾ. ಸಿದ್ದಲಿಂಗ ಮಹಾಸ್ವಾಮಿಗಳು ಮತ್ತು ಯದ್ದಲದೊಡ್ಡಿಯ ಸುವರ್ಣಗಿರಿ ವಿರಕ್ತಮಠದ ಶ್ರೀ ಮ. ನಿ. ಪ್ರ. ಮಹಾಲಿಂಗ ಮಹಾಸ್ವಾಮಿಗಳ ಶುಭ ಆಶೀರ್ವಾದವೇ ನನ್ನ ಜೀವನಕ್ಕೆ ಆಧಾರವಾಗಿದೆ. ಕಾರುಣ್ಯ ಆಶ್ರಮದ ಪ್ರತಿಯೊಬ್ಬ ದಾನಿಗಳು ಕೂಡ ಕಾರುಣ್ಯ ಕುಟುಂಬದ ಯಜಮಾನರುಗಳಾಗಿ. ನಮ್ಮ ಭಾರತೀಯ ಸಂಸ್ಕಾರ ಸಂಸ್ಕೃತಿಯನ್ನು ಉಳಿಸುವಂತಹ ಉತ್ತಮ ಪ್ರಜೆಗಳಾಗಲಿ ಎನ್ನುವುದು ನನ್ನ ಮೂಲ ಆಶಯವಾಗಿದೆ.

–ಡಾ. ಚನ್ನಬಸವ ಸ್ವಾಮಿ

## ಜು.26ಕ್ಕೆ ಕನಕ ನೌಕರರ ಸಂಘದಿಂದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ: ಕೆ.ವಿರುಪಾಕ್ಷಪ್ಪ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಲೂಕು ಕುರುಬರ ಸಂಘ, ಶ್ರೀ ಕನಕ ನೌಕರರ ಸಂಘ, ಮತ್ತು ಮಹಿಳಾ ಘಟಕದ ವತಿಯಿಂದ 2025-26ನೇ ಸಾಲಿನ ತಾಲೂಕು ಮಟ್ಟದ ಪದವಿ ಪೂರ್ವ ಮತ್ತು ಬಿ.ಎಡ್, ಕಾಲೇಜಿನ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಭಾನುವಾರ ಜು.26 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಕನಕದಾಸ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಸಂಸದರಾದ ಕೆ.ವಿರುಪಾಕ್ಷಪ್ಪ ಹೇಳಿದರು.**

ನಗರದ ಪತ್ರಿಕಾ ಭವನದಲ್ಲಿ ಜು.21 ಮಂಗಳವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು, ಹಾಲುಮತ ಸಮಾಜ ಶೈಕ್ಷಣಿಕವಾಗಿ ಬೆಳೆಯಬೇಕು. ಶೇ.90 ಕ್ಕಿಂತ ಹೆಚ್ಚು ಅಂಕಗಳ ಪಡೆದ ವಿದ್ಯಾರ್ಥಿಗಳನ್ನು ಗುರುತಿಸಿ, ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದ್ದೇವೆ. ಇಂತಹ ಕಾರ್ಯಕ್ರಮಗಳ ಮೂಲಕ ಹೆಚ್ಚಿನ ಶೈಕ್ಷಣಿಕ ಪ್ರಗತಿ ಆಗಬೇಕೆಂಬ ಉದ್ದೇಶದಿಂದ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ,




ದಿವ್ಯ ಸಾನಿಧ್ಯವನ್ನು ಕಾಗಿನೆಲೆಯ ಶ್ರೀ ಕನಕ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಮಹಾಸ್ವಾಮಿಗಳು ವಹಿಸುವರು, ಸುಕಾಲಪೇಟೆಯ ನಂಜುಂಡಯ್ಯ ಗುರುವಿನ್, ತುರ್ವಿಹಾಳ ಅಮೋಘ ಸಿದ್ದೇಶ್ವರ ಮಠದ ಮಾದಯ್ಯಸ್ವಾಮಿ ಗುರುವಿನ್, ಚಿದಾನಂದಯ್ಯ ಗುರುವಿನ್, ಸಾನಿಧ್ಯ ವಹಿಸುವರು. ಮಾಜಿ ಸಂಸದ ಕೆ.ವಿರುಪಾಕ್ಷಪ್ಪ ಅಧ್ಯಕ್ಷತೆ ಹಾಗೂ ಉದ್ಘಾಟಕರಾಗಿ ಕೊಪ್ಪಳದ ಸಂಸದ ರಾಜಶೇಖರ ಹಿಟ್ನಾಳ್, ಕನಕದಾಸರ ಭಾವಚಿತ್ರಕ್ಕೆ ವಿರೋಧ ಪಕ್ಷದ ಮುಖ್ಯ ಸಚೇತಕರಾದ ದೊಡ್ಡನಗೌಡ ಪಾಟೀಲ್ ಮಾಲಾರ್ಪಣೆ ಮಾಡುವರು.

ಮುಖ್ಯ ಅಥಿತಿಗಳಾಗಿ ಶಾಸಕ ಹಂಪನಗೌಡ ಬಾದರ್ಲಿ, ಆರ್.ಬಸನಗೌಡ ತುರ್ವಿಹಾಳ, ಎಂಎಲ್ಸಿ ಬಸನಗೌಡ ಬಾದರ್ಲಿ, ಮಾಜಿ ಸಚಿವರು ಹಾಗೂ ಕೆಒಎಫ್ ರಾಜ್ಯಾಧ್ಯಕ್ಷರಾದ ವೆಂಕಟರಾವ್ ನಾಡಗೌಡ, ಬಿಜೆಪಿ ಮುಖಂಡ ಕೆ.ಕರಿಯಪ್ಪ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಕೆ.ಭೀಮಣ್ಣ, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಎಂ.ದೊಡ್ಡಬಸವರಾಜ, ವಿಶೇಷ ಆಹ್ವಾನಿತರಾಗಿ ಹಾಗೂ ಅಥಿತಿಗಳಾಗಿ ತಾಲೂಕಿನ ಗಣ್ಯಮಾನ್ಯರು, ಮುಖಂಡರು, ಸಮಾಜದ ಬಂಧು-ಬಾಂದವರು ಆಗಮಿಸುವರು ಎಂದು ತಿಳಿಸಿದರು.

ಶ್ರೀ ಕನಕ ನೌಕರರ ಸಂಘದ ತಾಲೂಕು ಅಧ್ಯಕ್ಷರಾದ ಗ್ಯಾನಪ್ಪ ಕನ್ನಾಪೇಟೆ ಮಾತನಾಡಿ, ಪ್ರೌಢಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿಯಾದ ಬಸವರಾಜ ಬಿಳೇಕಲ್, ಜಿಲ್ಲಾ ಉಪನ್ಯಾಸಕರ ಸಂಘದ ಸಂಘಟನಾ ಕಾರ್ಯದರ್ಶಿ ಶರಣಪ್ಪ ಹೊಸಳ್ಳಿ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಂಘದ ಕಾರ್ಯದರ್ಶಿ ಹೊಳೆಯಪ್ಪ ನಾಗಲಾಪುರ, ಕನಕ ನೌಕರರ ಸಂಘದ ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ಕವಿತಾ ಎನ್.ಎಚ್, ತಾಲೂಕು ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಉಪಾಧ್ಯಕ್ಷ ವೀರೇಶ ಸಾಸಲಮರಿ, ತಾಲೂಕು ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಖಜಾಂಚಿ ಮಲ್ಲಪ್ಪ ಬಸ್ಸಾಪುರ, ಸಂಘಟನಾ ಕಾರ್ಯದರ್ಶಿ ಆದೇಶ, ಆರೋಗ್ಯ ಇಲಾಖೆಯ ನಿವೃತ್ತ ನೌಕರರಾದ ಗುರುಶಾಂತಮ್ಮ ಸೇರಿದಂತೆ ಅನೇಕರು ಸನ್ಮಾನಿತರಾಗಿದ್ದಾರೆ. ಹಾಗೂ ಹಾಲುಮತ ಸಮಾಜದ ಗಂಜ್ ವರ್ತಕರು ಸಿಂಧನೂರು ಇವರಿಂದ ಭೋಜನದ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ: ತಾಲೂಕು ಕುರುಬರ ಸಂಘದ ಅಧ್ಯಕ್ಷ ಕೆ.ಭೀಮಣ್ಣ, ಗಂಜ್ ವರ್ತಕರ ಸಂಘದ ಪ್ರಧಾನ ಕಾರ್ಯದರ್ಶಿ ಪಕೀರಪ್ಪ ಬಾಗೋಡಿ ತಿಡಿಗೋಳ, ತಾಲೂಕು ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ವಿ.ಬಸವರಾಜ, ಕನಕ ನೌಕರರ ಸಂಘದ ಜಿಲ್ಲಾಧ್ಯಕ್ಷ ನಾಗರಾಜ ಅರಳಿಮರ, ಕನಕ ಗುರುಪೀಠ ಅಧ್ಯಕ್ಷ ಅಮರೇಶಪ್ಪ ಮೈಲಾರ್, ಶ್ರೀ ಕನಕ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಹುಚ್ಚಪ್ಪ ನೇಗಿಲಿ, ಸೇರಿದಂತೆ ಸಮಾಜದ ಅನೇಕ ಮುಖಂಡರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### MSW (ಮಾಸ್ಟರ್ ಆಫ್ ಸೋಶಿಯಲ್ ವರ್ಕ್)

ಒಖಫ (ಮಾಸ್ಟರ್ ಆಫ್ ಸೋಶಿಯಲ್ ವರ್ಕ್) ಕೋರ್ಸ್ ಸಂಪೂರ್ಣ ಮಾಹಿತಿ

ಒಖಫ (Master of Social Work) ಎನ್ನುವುದು ಸಮಾಜ ಕಲ್ಯಾಣ, ಸಾಮಾಜಿಕ ನ್ಯಾಯ, ಮಾನವ ಹಕ್ಕುಗಳು ಹಾಗೂ ಸಮುದಾಯ ಅಭಿವೃದ್ಧಿಗೆ ಸಂಬಂಧಿಸಿದ 2 ವರ್ಷಗಳ ಸ್ನಾತಕೋತ್ತರ (Post Graduate) ವೃತ್ತಿಪರ ಪದವಿಯಾಗಿದೆ. ಸಮಾಜದ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಅವುಗಳಿಗೆ ಪರಿಹಾರ ಕಂಡುಕೊಳ್ಳುವ ಕೌಶಲ್ಯವನ್ನು ಈ ಕೋರ್ಸ್ ಮೂಲಕ ವಿದ್ಯಾರ್ಥಿಗಳು ಪಡೆಯುತ್ತಾರೆ. ಸಮಾಜ ಸೇವೆ, ಮಾನವ ಸಂಪನ್ಮೂಲ ನಿರ್ವಹಣೆ (HR), ಆರೋಗ್ಯ ಕ್ಷೇತ್ರ ಹಾಗೂ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಲು ಬಯಸುವವರಿಗೆ ಇದು ಅತ್ಯುತ್ತಮ ಆಯ್ಕೆಯಾಗಿದೆ.

ಕೋರ್ಸ್‌ನ ಪ್ರಮುಖ ವಿವರಗಳು

ಕೋರ್ಸ್ ಹೆಸರು: ಒಚಿಣಜಡಿ ಔಜಿ ಖಿಂಛಿಚಿಟ ಘಂಡಿಞ (MSW)

ಕೋರ್ಸ್ ಮಟ್ಟ: ಸ್ನಾತಕೋತ್ತರ (PG)

ಅವಧಿ: 2 ವರ್ಷಗಳು (4 ಸೆಮಿಸ್ಟರ್‌ಗಳು)

ಅರ್ಹತೆ: ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ವಿಷಯದಲ್ಲಿ ಪದವಿ (BA, BSW, B.Com, B.Sc, BBM, BBA ಮುಂತಾದವು)

ಪ್ರವೇಶ ವಿಧಾನ: ಅರ್ಹತಾ ಪರೀಕ್ಷೆಯ ಅಂಕಗಳು ಅಥವಾ ಕೆಲವು ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ

ಕೋರ್ಸ್‌ನಲ್ಲಿ ಕಲಿಯುವ ವಿಷಯಗಳು

ಸಾಮಾಜಿಕ ಕಾರ್ಯದ ತತ್ವಗಳು ಮತ್ತು ವಿಧಾನಗಳು
ಮಾನವ ನಡವಳಿಕೆ ಮತ್ತು ವ್ಯಕ್ತಿತ್ವ ವಿಕಾಸ
ಸಾಮಾಜಿಕ ನೀತಿ ಮತ್ತು ಸಾಮಾಜಿಕ ನ್ಯಾಯ
ಮಾನವ ಹಕ್ಕುಗಳು ಮತ್ತು ಮಕ್ಕಳ ಹಕ್ಕುಗಳು
ಸಮುದಾಯ ಸಂಘಟನೆ ಮತ್ತು ಅಭಿವೃದ್ಧಿ
ಗ್ರಾಮೀಣ ಹಾಗೂ ನಗರಾಭಿವೃದ್ಧಿ
ಮಹಿಳಾ ಮತ್ತು ಮಕ್ಕಳ ಕಲ್ಯಾಣ
ವೈದ್ಯಕೀಯ ಮತ್ತು ಮನೋವೈದ್ಯಕೀಯ ಸಮಾಜ ಸೇವೆ
ಮಾನವ ಸಂಪನ್ಮೂಲ ನಿರ್ವಹಣೆ (HRM)
ಕಾರ್ಮಿಕ ಕಲ್ಯಾಣ ಮತ್ತು ಕೈಗಾರಿಕಾ ಸಂಬಂಧಗಳು
ಕೌನ್ಸೆಲಿಂಗ್ ಕೌಶಲ್ಯಗಳು
ಸಂಶೋಧನಾ ವಿಧಾನಗಳು ಮತ್ತು ಸಾಮಾಜಿಕ ಸಮೀಕ್ಷೆ
ಕ್ಷೇತ್ರ ಕಾರ್ಯ (Field Work) ಮತ್ತು ಇಂಟರ್ನ್‌ಶಿಪ್

ವಿಶೇಷತೆಗಳು (Specializations)

ವೈದ್ಯಕೀಯ ಮತ್ತು ಮನೋವೈದ್ಯಕೀಯ ಸಮಾಜ ಸೇವೆ (Medical & Psychiatric Social Work)
ಸಮುದಾಯ ಅಭಿವೃದ್ಧಿ (Community Development)
ಮಾನವ ಸಂಪನ್ಮೂಲ ನಿರ್ವಹಣೆ (Human Resource Management)
ಕುಟುಂಬ ಮತ್ತು ಮಕ್ಕಳ ಕಲ್ಯಾಣ
ಗ್ರಾಮೀಣಾಭಿವೃದ್ಧಿ
ಕಾರ್ಮಿಕ ಕಲ್ಯಾಣ ಮತ್ತು ಕೈಗಾರಿಕಾ ಸಂಬಂಧಗಳು
ಕ್ರಿಮಿನಲ್ ಜಸ್ಟಿಸ್ ಮತ್ತು ತಿದ್ದುಪಡಿ ಸೇವೆಗಳು

ಅಗತ್ಯ ಕೌಶಲ್ಯಗಳು

ಉತ್ತಮ ಸಂವಹನ ಕೌಶಲ್ಯ
ನಾಯಕತ್ವ ಗುಣ
ಸಮಸ್ಯೆ ಪರಿಹರಿಸುವ ಸಾಮರ್ಥ್ಯ
ಕೌನ್ಸೆಲಿಂಗ್ ಕೌಶಲ್ಯ
ತಂಡದೊಂದಿಗೆ ಕೆಲಸ ಮಾಡುವ ಸಾಮರ್ಥ್ಯ
ಸಹಾನುಭೂತಿ ಮತ್ತು ಸಾಮಾಜಿಕ ಜವಾಬ್ದಾರಿ
ಯೋಜನೆ ರೂಪಿಸುವ ಹಾಗೂ ನಿರ್ವಹಿಸುವ ಕೌಶಲ್ಯ

ಉದ್ಯೋಗಾವಕಾಶಗಳು

ಒಖಫ ಪದವೀಧರರಿಗೆ ಸರ್ಕಾರಿ ಹಾಗೂ ಖಾಸಗಿ ಕ್ಷೇತ್ರಗಳಲ್ಲಿ ಉತ್ತಮ ಅವಕಾಶಗಳಿವೆ.

ಎನ್‌ಜಿಒ (NGO) ಮತ್ತು ಸಾಮಾಜಿಕ ಸಂಸ್ಥೆಗಳಲ್ಲಿ ಪ್ರಾಜೆಕ್ಟ್ ಮ್ಯಾನೇಜರ್
Medical Social Worker DV ಆಸ್ಪತ್ರೆಗಳಲ್ಲಿ
HR Officer / HR Executive DV ಕಾರ್ಪೊರೇಟ್ ಕಂಪನಿಗಳಲ್ಲಿ
Counselor ಆಗಿ ಶಾಲೆಗಳು, ಕಾಲೇಜುಗಳು ಹಾಗೂ ಆಸ್ಪತ್ರೆಗಳಲ್ಲಿ
Field Officer DV ಗ್ರಾಮೀಣಾಭಿವೃದ್ಧಿ ಯೋಜನೆಗಳಲ್ಲಿ
Child Protection Officer
Women Welfare Officer
CSR (Corporate Social Responsibility) Executive
Rehabilitation Officer
Program Coordinator
Research Associate
ಸರ್ಕಾರಿ ಕಲ್ಯಾಣ ಇಲಾಖೆಗಳು ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ವಿವಿಧ ಹುದ್ದೆಗಳು

ಉದ್ಯೋಗ ನೀಡುವ ಪ್ರಮುಖ ಸಂಸ್ಥೆಗಳು

ಸರ್ಕಾರಿ ಇಲಾಖೆಗಳು
ಆಸ್ಪತ್ರೆಗಳು
ಎನ್‌ಜಿಒಗಳು
ಯುನಿಸೆಫ್ (UNICEF), WHO ಮುಂತಾದ ಅಂತರರಾಷ್ಟ್ರೀಯ ಸಂಸ್ಥೆಗಳು
ಕಾರ್ಪೊರೇಟ್ ಕಂಪನಿಗಳು (HR ವಿಭಾಗ)
ಶಿಕ್ಷಣ ಸಂಸ್ಥೆಗಳು
ಗ್ರಾಮೀಣಾಭಿವೃದ್ಧಿ ಮತ್ತು ಮಹಿಳಾ-ಮಕ್ಕಳ ಕಲ್ಯಾಣ ಸಂಸ್ಥೆಗಳು

ವೇತನ (Salary)

ಆರಂಭಿಕ ವೇತನ: 2.5 ಲಕ್ಷದಿಂದ 5 ಲಕ್ಷ ವಾರ್ಷಿಕ

ಅನುಭವದ ನಂತರ: 6 ಲಕ್ಷದಿಂದ 12 ಲಕ್ಷ ಅಥವಾ ಅದಕ್ಕಿಂತ ಹೆಚ್ಚು ವಾರ್ಷಿಕ

HR ಹಾಗೂ CSR ಕ್ಷೇತ್ರಗಳಲ್ಲಿ ಅನುಭವ ಹೆಚ್ಚಾದಂತೆ ವೇತನವೂ ಗಮನಾರ್ಹವಾಗಿ ಹೆಚ್ಚಾಗುತ್ತದೆ.

ಉನ್ನತ ಶಿಕ್ಷಣ

M.Phil (ಲಭ್ಯವಿದ್ದಲ್ಲಿ)
Ph.D. in Social Work
NET / SET
ವಿವಿಧ ಡಿಪ್ಲೊಮಾ ಮತ್ತು ಪ್ರಮಾಣಪತ್ರ ಕೋರ್ಸ್‌ಗಳು
ಕೌನ್ಸೆಲಿಂಗ್, HR ಮತ್ತು CSR ಕ್ಷೇತ್ರಗಳಲ್ಲಿ ವಿಶೇಷ ತರಬೇತಿ

MSW ಕೋರ್ಸ್‌ನ ಪ್ರಯೋಜನಗಳು

ಸಮಾಜದ ಅಭಿವೃದ್ಧಿಗೆ ನೇರವಾಗಿ ಕೊಡುಗೆ ನೀಡುವ ಅವಕಾಶ
ಸರ್ಕಾರಿ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಉತ್ತಮ ಉದ್ಯೋಗ
HR, CSR, NGO, ಆಸ್ಪತ್ರೆ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ವಿಶಾಲ ಅವಕಾಶಗಳು
ದೇಶ ಹಾಗೂ ವಿದೇಶಗಳಲ್ಲಿ ಉದ್ಯೋಗ ಸಾಧ್ಯತೆ
ನಾಯಕತ್ವ, ಸಂವಹನ ಮತ್ತು ಸಮಸ್ಯೆ ಪರಿಹಾರ ಕೌಶಲ್ಯಗಳ ಅಭಿವೃದ್ಧಿ

# ಜಂತರ್ ಮಂತರ್ ಘಟನೆ ವಿರುದ್ಧ ಚಂದ್ರಶೇಖರ್ ಆಜಾದ್ ಧರಣಿ, AIMIM ಅಧ್ಯಕ್ಷ ಒವೈಸಿ ಬೆಂಬಲ!

ನೈಜ್ಯ ದೆಸೆ ನ್ಯೂಸ್

**ಹೊಸದಿಲ್ಲಿ: ಜಂತರ್ ಮಂತರ್‌ನಲ್ಲಿ ಶಾಂತಿಯುತ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳ ಮೇಲೆ ನಡೆದಿರುವ ಅನ್ಯಾಯ ಹಾಗೂ ಆಡಳಿತಾತ್ಮಕ ದೌರ್ಜನ್ಯವನ್ನು ತೀವ್ರವಾಗಿ ಖಂಡಿಸಿ, ಭೀಮ್ ಆರ್ಮಿ ಮುಖ್ಯಸ್ಥ ಹಾಗೂ ಸಂಸದ ಚಂದ್ರಶೇಖರ್ ಆಜಾದ್ ಅವರು ಸಂಸತ್ ಆವರಣದಲ್ಲಿ ಧರಣಿ ಸತ್ಯಾಗ್ರಹವನ್ನು ಹಮ್ಮಿಕೊಂಡಿದ್ದಾರೆ.**

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಶಾಂತಿಯುತ ಪ್ರತಿಭಟನೆಯ ಸಾಂವಿಧಾನಿಕ ಹಕ್ಕಿದ್ದು, ಅದನ್ನು ದಮನಿಸುವ ಯತ್ನಗಳನ್ನು ಸಹಿಸುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.



ಧರಣಿ ಸ್ಥಳಕ್ಕೆ ಖುದ್ದಾಗಿ ಆಗಮಿಸಿದ ಆಲ್ ಇಂಡಿಯಾ ಮಜ್ಲಿಸ್-ಎ-ಇತ್ತೆಹಾದುಲ್ ಮುಸ್ಲಿಮೀನ್ (AIMIM) ರಾಷ್ಟ್ರೀಯ ಅಧ್ಯಕ್ಷ ಹಾಗೂ ಸಂಸದ ಅಸದುದ್ದೀನ್ ಓವೈಸಿ ಅವರು ಚಂದ್ರಶೇಖರ್ ಆಜಾದ್ ಅವರ ಹೋರಾಟಕ್ಕೆ ಸಾತ್ ನೀಡಿ, ತಮ್ಮ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ. ಸಂವಿಧಾನ ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಪ್ರತಿಭಟನಾ ಹಕ್ಕನ್ನು ರಕ್ಷಿಸಲು ವಿರೋಧ ಪಕ್ಷಗಳು ಹಾಗೂ ಯುವ ನಾಯಕರು ಒಗ್ಗಟ್ಟು ಪ್ರದರ್ಶಿಸುತ್ತಿದ್ದಾರೆ. ಜಂತರ್ ಮಂತರ್‌ನಲ್ಲಿ ವಿದ್ಯಾರ್ಥಿಗಳ ಮೇಲೆ ಅನ್ಯಾಯವಾಗಿ ಕ್ರಮ ಕೈಗೊಂಡ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಮತ್ತು ಸೂಕ್ತ ನ್ಯಾಯ ಒದಗಿಸಬೇಕು.ಸಂತ್ರಸ್ತ ವಿದ್ಯಾರ್ಥಿಗಳಿಗೆ ನ್ಯಾಯ ಸಿಗುವವರೆಗೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯುವವರೆಗೆ ಈ ಹೋರಾಟವನ್ನು ವಿವಿಧ ಹಂತಗಳಲ್ಲಿ ಮುಂದುವರಿಸಲು ನಾಯಕರು ತೀರ್ಮಾನಿಸಿದ್ದಾರೆ.

"ಪ್ರಜಾಪ್ರಭುತ್ವದ ಸ್ತಂಭಗಳನ್ನು ದುರ್ಬಳಕೆ ಮಾಡಿಕೊಂಡು ಯುವಕರ ಧ್ವನಿಯನ್ನು ಅಡಗಿಸಲು ನೋಡುತ್ತಿರುವುದನ್ನು ಯಾವುದೇ ಕಾರಣಕ್ಕೂ ಒಪ್ಪಲು ಸಾಧ್ಯವಿಲ್ಲ. ವಿದ್ಯಾರ್ಥಿಗಳಿಗೆ ನ್ಯಾಯ ಸಿಗುವವರೆಗೆ ನಮ್ಮ ಹೋರಾಟ ನಿಲ್ಲುವುದಿಲ್ಲ." ಚಂದ್ರಶೇಖರ್ ಆಜಾದ್, ಭೀಮ್ ಆರ್ಮಿ ಮುಖ್ಯಸ್ಥ

# ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ರಾಮಕೃಷ್ಣ ವಿವೇಕಾನಂದ ಆಶ್ರಮದ ವ್ಯಕ್ತಿತ್ವ ವಿಕಸನ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಕೇವಲ ಪಠ್ಯಪುಸ್ತಕದ ಜ್ಞಾನಕ್ಕೆ ಸೀಮಿತವಾಗದೆ, ಉತ್ತಮ ವ್ಯಕ್ತಿತ್ವ, ನೈತಿಕ ಮೌಲ್ಯಗಳು, ಶಿಸ್ತು, ಆತ್ಮವಿಶ್ವಾಸ ಹಾಗೂ ರಾಷ್ಟ್ರಪ್ರೇಮವನ್ನು ಬೆಳೆಸಿಕೊಳ್ಳುವುದು ಅತ್ಯಗತ್ಯ ಎಂಬ ಉದ್ದೇಶದಿಂದ ರಾಮಕೃಷ್ಣ ವಿವೇಕಾನಂದ ಆಶ್ರಮ, ಬಪ್ಪೂರು ರಸ್ತೆ, ಸಿಂಧನೂರು ವತಿಯಿಂದ ಪ್ರೌಢ ಶಾಲಾ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿರುವ *"ವ್ಯಕ್ತಿತ್ವ ವಿಕಸನ ಕಾರ್ಯಕ್ರಮ"*ದ ಎರಡನೇ ದಿನದ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.**

ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ಆಶ್ರಮದ ಅಧ್ಯಕ್ಷರಾದ ಪೂಜ್ಯ ಶ್ರೀ ಸ್ವಾಮಿ ಸದಾನಂದ ಮಹಾರಾಜ್ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, "ಯಶಸ್ಸು ಎನ್ನುವುದು ಕೇವಲ ಅಂಕಗಳಿಂದ ಅಳೆಯುವುದಲ್ಲ; ಉತ್ತಮ ಗುಣ, ಶಿಸ್ತು, ಸಮಯಪಾಲನೆ, ಪರಿಶ್ರಮ, ಸತ್ಯನಿಷ್ಠೆ ಹಾಗೂ ಸೇವಾ ಮನೋಭಾವದಿಂದ ಜೀವನವನ್ನು ರೂಪಿಸಿಕೊಳ್ಳುವುದೇ ನಿಜವಾದ ಯಶಸ್ಸು" ಎಂದು ಹೇಳಿದರು. ವಿದ್ಯಾರ್ಥಿಗಳು ಏಕಾಗ್ರತೆಯನ್ನು ಬೆಳೆಸಿಕೊಳ್ಳಲು ಪ್ರತಿದಿನ ನಿಯಮಿತ ಅಧ್ಯಯನ, ಉತ್ತಮ ಪುಸ್ತಕಗಳ ಓದು, ಧ್ಯಾನ, ಯೋಗ ಹಾಗೂ ಸಕಾರಾತ್ಮಕ ಚಿಂತನೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು.



ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳ ಅತಿಯಾದ ಬಳಕೆಯಿಂದ ದೂರವಿದ್ದು, ಸಮಯವನ್ನು ಸದುಪಯೋಗಪಡಿಸಿಕೊಂಡಾಗ ಮಾತ್ರ ಉತ್ತಮ ಭವಿಷ್ಯ ನಿರ್ಮಾಣ ಸಾಧ್ಯ ಎಂದು ಅವರು ಸಲಹೆ ನೀಡಿದರು.

ಮುಖ್ಯ ಉಪನ್ಯಾಸಕರಾಗಿ ಭಾಗವಹಿಸಿದ್ದ ಶ್ರೀ ವಿಲಾಸಕುಮಾರ ದೇಸಾಯಿ, ಸಂಸ್ಥಾಪಕ-ನಿರ್ದೇಶಕರು, ಹಿಂದೂಸ್ತಾನ ಯಾತ್ರಾ ಹಾಗೂ ಯಾತ್ರಾ ರತ್ನ ರಾಜ್ಯ ಪ್ರಶಸ್ತಿ ಪುರಸ್ಕೃತರು, ಹುಬ್ಬಳ್ಳಿ, ಅವರು "ವಿವೇಕ ವಿದ್ಯಾರ್ಥಿ" ವಿಷಯದ ಕುರಿತು ಉಪನ್ಯಾಸ ನೀಡಿ, ಸ್ವಾಮಿ ವಿವೇಕಾನಂದರ ಆದರ್ಶಗಳು ಇಂದಿನ ಯುವಜನತೆಗೆ ದಾರಿದೀಪವಾಗಿವೆ ಎಂದು ಹೇಳಿದರು. ಸ್ವಾಮಿ ವಿವೇಕಾನಂದರ "ಏಳಿ, ಎದ್ದೇಳಿ, ಗುರಿ ಮುಟ್ಟುವವರೆಗೆ ನಿಲ್ಲಬೇಡಿ" ಎಂಬ ಸಂದೇಶವನ್ನು ಉಲ್ಲೇಖಿಸಿದ ಅವರು, ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಜೀವನಕ್ಕೆ ಸ್ಪಷ್ಟ ಗುರಿಯನ್ನು ಹೊಂದಿ, ಆತ್ಮವಿಶ್ವಾಸ, ನಿರಂತರ ಪರಿಶ್ರಮ ಮತ್ತು ಉತ್ತಮ ಸಂಸ್ಕಾರಗಳೊಂದಿಗೆ ಮುಂದೆ ಸಾಗಿದರೆ ಯಾವುದೇ ಕ್ಷೇತ್ರದಲ್ಲೂ ಸಾಧನೆ ಮಾಡಬಹುದು ಎಂದು ತಿಳಿಸಿದರು. ವಿದ್ಯಾರ್ಥಿಗಳು ದೇಶದ ಉತ್ತಮ ನಾಗರಿಕರಾಗಿ ಸಮಾಜದ ಅಭಿವೃದ್ಧಿಗೆ ತಮ್ಮ ಕೊಡುಗೆ ನೀಡಬೇಕು ಎಂದು ಕರೆ ನೀಡಿದರು.

ಇಂದು ಈ ಕಾರ್ಯಕ್ರಮವನ್ನು ಸರ್ಕಾರಿ ಪ್ರೌಢ ಶಾಲೆ, ಬರಗೂರು ಹಾಗೂ ಸರ್ಕಾರಿ ಪ್ರೌಢ ಶಾಲೆ, ಅಂಜೂರಿ ಕ್ಯಾಂಪ್ ಶಾಲೆಗಳಲ್ಲಿ ಆಯೋಜಿಸಲಾಗಿದ್ದು, ವಿದ್ಯಾರ್ಥಿಗಳು ಅತ್ಯಂತ ಉತ್ಸಾಹದಿಂದ ಭಾಗವಹಿಸಿದರು. ಉಪನ್ಯಾಸಗಳ ನಂತರ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ಅವರ ಸಂದೇಹಗಳಿಗೆ ಉತ್ತರಿಸುವ ಮೂಲಕ ಜೀವನ ಕೌಶಲ್ಯ, ಶಿಕ್ಷಣದ ಮಹತ್ವ ಹಾಗೂ ವ್ಯಕ್ತಿತ್ವ ವಿಕಸನ ಕುರಿತು ಮಾರ್ಗದರ್ಶನ ನೀಡಲಾಯಿತು.

ಕಾರ್ಯಕ್ರಮದ ಅಂಗವಾಗಿ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಆಶ್ರಮದ ವತಿಯಿಂದ "ವಿದ್ಯುತ್ ವಾಣಿ" ಪುಸ್ತಕವನ್ನು ಉಚಿತವಾಗಿ ವಿತರಿಸಲಾಯಿತು. ಉತ್ತಮ ಚಿಂತನೆ, ಮೌಲ್ಯಾಧಾರಿತ ಜೀವನ ಹಾಗೂ ಓದುವ ಸಂಸ್ಕೃತಿಯನ್ನು ಬೆಳೆಸುವ ಉದ್ದೇಶದಿಂದ ಈ ಪುಸ್ತಕ ವಿತರಣೆಯನ್ನು ಮಾಡಲಾಯಿತು.

ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ನಾಯಕತ್ವ, ಸೇವಾ ಮನೋಭಾವ, ನೈತಿಕತೆ ಮತ್ತು ರಾಷ್ಟ್ರಭಕ್ತಿಯನ್ನು ಬೆಳೆಸುವ ಇಂತಹ ಕಾರ್ಯಕ್ರಮಗಳು ಇಂದಿನ ಸಮಾಜಕ್ಕೆ ಅತ್ಯಂತ ಅಗತ್ಯವಾಗಿದ್ದು, ರಾಮಕೃಷ್ಣ ವಿವೇಕಾನಂದ ಆಶ್ರಮದ ಈ ಪ್ರಯತ್ನಕ್ಕೆ ಶಿಕ್ಷಕರು, ಪಾಲಕರು ಹಾಗೂ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದರು. ಆಶ್ರಮವು ಮುಂದಿನ ದಿನಗಳಲ್ಲಿಯೂ ವಿವಿಧ ಶಾಲೆಗಳಲ್ಲಿ ಇಂತಹ ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳಲಿದೆ.

# ಮಾನವ ಬಂಧುತ್ವ ವೇದಿಕೆಯಿಂದ ಶಾಂತಿಯುತ ಸಮಾಜ ನಿರ್ಮಾಣಕ್ಕೆ ಕರೆ

ನೈಜ್ಯ ದೆಸೆ ನ್ಯೂಸ್

**ಸಿರವಾರ: 'ಸಮಾನತೆ, ಸಹಬಾಳ್ವೆ ಮತ್ತು ಪರಸ್ಪರ ಗೌರವ ಮನೋಭಾವದಿಂದ ಮಾತ್ರ ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದ ನೆಲೆಸಲು ಸಾಧ್ಯ. ಬಂಧುತ್ವದ ಭಾವನೆಯಿಂದಲೇ ಶಾಂತಿಯುತ ಸಮಾಜ ನಿರ್ಮಾಣವಾಗುತ್ತದೆ' ಎಂದು ಮುಖಂಡ ಎನ್.ಉದಯಕುಮಾರ ಹೇಳಿದರು.**

ತಾಲ್ಲೂಕಿನ ಮಲ್ಲಟ ಗ್ರಾಮದಲ್ಲಿ ಮಾನವ ಬಂಧುತ್ವ ವೇದಿಕೆಯಿಂದ ವೇದಿಕೆಯ ಸಂಚಾಲಕರಿಗೆ ಭಾನು ವಾರ ನಡೆದ ಒಂದು ದಿನದ ಕಾರ್ಯಾಗಾರದಲ್ಲಿ ಮಾತನಾಡಿದರು. 'ಸಮಾಜದಲ್ಲಿರುವ ಪ್ರತಿಯೊಬ್ಬರೂ ಮೂಢನಂಬಿಕೆಯಿಂದ ಹೊರಬಂದು ವೈಚಾರಿಕತೆ ಬೆಳೆಸಿಕೊಳ್ಳಬೇಕು. ಮೇಲು-ಕೀಳು ಎಂಬ ಅಸಮಾನತೆ ಮತ್ತು ಭೇದಭಾವವನ್ನು ತೊರೆದು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು' ಎಂದರು.



ಮಾನವ ಬಂಧುತ್ವ ವೇದಿಕೆಯ ತಾಲ್ಲೂಕು ಸಂಚಾಲಕ ಮೇಶಕ್ ದೊತ್ನಿ ಮಾತನಾಡಿ, 'ದೇಶದಲ್ಲಿ ಸಮಾನತಾವಾದಿ ವಿಚಾರಧಾರೆಯನ್ನು ಕುಂಠಿತಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ. ಶಿಕ್ಷಣದ ಮೂಲಕ ಸ್ವಾಭಿಮಾನ ಬೆಳೆಸಿಕೊಂಡು ಸಮಾನತೆ, ಸಹೋದರತೆ ಹಾಗೂ ಮಾನವ ಬಂಧುತ್ವದ ಮೌಲ್ಯಗಳನ್ನು ಸಮಾಜದಲ್ಲಿ ಬಲಪಡಿಸಬೇಕು' ಎಂದು ಹೇಳಿದರು.

ಮಾನವ ಬಂಧುತ್ವ ವೇದಿಕೆಯ ರಾಜ್ಯ ಮುಖಂಡ ಟಿ.ರತ್ನಾಕರ್, ಜಿಲ್ಲಾ ಸಂಚಾಲಕ ಶಿವರಾಜ ಹರವಿ, ಶಿವು ಕುಮಾರ ಹೆಗ್ಗಡದಿನ್ನಿ, ಶಿವುಕುಮಾರ ಹರಿವಿ, ಬಾಲಪ್ಪ ಹಳ್ಳಿ ಹೊಸೂರು, ಮಲ್ಲಿಕಾರ್ಜುನ, ಹುಲಿಗಪ್ಪ ಮಡಿವಾಳ, ತಿಮ್ಮಣ್ಣ ಮರಾಟ, ಮೌನೇಶ ಕವಿತಾಳ, ಪ್ರಕಾಶ್ ಗಣದಿನ್ನಿ ಹಾಗೂ ಸಿಮೋನ್ ಭಾಗವಹಿಸಿದ್ದರು.

# ಅಂಚೆ ಕಚೇರಿ ಸ್ಥಳಾಂತರ

ನೈಜ್ಯ ದೆಸೆ ನ್ಯೂಸ್

**ರಾಯಚೂರು ಜುಲೈ 21 (ಕರ್ನಾಟಕ ವಾರ್ತೆ): ಭಾರತ ಸರ್ಕಾರದ ಅಂಚೆ ಇಲಾಖೆ ಸಾರ್ವಜನಿಕರಿಗೆ ಇನ್ನಷ್ಟು ಸುಲಭ, ಗುಣಮಟ್ಟದ ಹಾಗೂ ಪರಿಣಾಮಕಾರಿ ಅಂಚೆ ಸೇವೆಗಳನ್ನು ಒದಗಿಸುವ ಉದ್ದೇಶದಿಂದ ರಾಯಚೂರು ನಗರದ ರೈಲ್ವೇ ನಿಲ್ದಾಣದ ಸಮೀಪ ಕಾರ್ಯನಿರ್ವಹಿಸುತ್ತಿದ್ದ ರಾಯಚೂರು ಆರ್.ಎಸ್. ಅಂಚೆ ಕಚೇರಿಯನ್ನು ರಾಯಚೂರಿನ ನವೋದಯ ನವೋದಯ ಮೆಡಿಕಲ್ ಕಾಲೇಜು ಆವರಣಕ್ಕೆ ಅಂಚೆ ಕಚೇರಿಯನ್ನು ಸ್ಥಳಾಂತರಿಸಲಾಗಿದೆ ಎಂದು ರಾಯಚೂರು ವಿಭಾಗದ ಅಂಚೆ ಅಧೀಕ್ಷಕರು ತಿಳಿಸಿದ್ದಾರೆ.**

ನವೋದಯ ಮೆಡಿಕಲ್ ಕಾಲೇಜು ಆವರಣದಲ್ಲಿ ನೂತನವಾಗಿ ಆರಂಭಗೊಂಡಿರುವ




ಈ ಅಂಚೆ ಕಚೇರಿಯು ಈ ಪ್ರದೇಶದ ಸಾರ್ವಜನಿಕರು, ವಿದ್ಯಾರ್ಥಿಗಳು, ವೈದ್ಯಕೀಯ ಸಿಬ್ಬಂದಿ ಹಾಗೂ ಸುತ್ತಮುತ್ತಲಿನ ನಿವಾಸಿಗಳಿಗೆ ಅಂಚೆ ಸೇವೆಗಳು ಮತ್ತಷ್ಟು ಸುಲಭವಾಗಿ ದೊರೆಯಲಿವೆ. ಈ ಅಂಚೆ ಕಚೇರಿಯಲ್ಲಿ ಸ್ಪೀಡ್ ಪೋಸ್ಟ್, ನೋಂದಾಯಿತ ಅಂಚೆ, ಸಾಮಾನ್ಯ ಅಂಚೆ, ಪಾರ್ಸಲ್ ಸೇವೆ, ಅಂಚೆ ಜೀವ ವಿಮೆ, ಗ್ರಾಮೀಣ ಅಂಚೆ ಜೀವ ವಿಮೆ, ಅಂಚೆ ಉಳಿತಾಯ ಯೋಜನೆಗಳು, ಸುಕನ್ಯಾ ಸಮೃದ್ಧಿ ಯೋಜನೆ, ಹಿರಿಯ ನಾಗರಿಕರ ಉಳಿತಾಯ ಯೋಜನೆ, ರಾಷ್ಟ್ರೀಯ ಉಳಿತಾಯ ಪ್ರಮಾಣ ಪತ್ರ, ಕಿಸಾನ್ ವಿಕಾಸ್ ಪತ್ರ ಸೇರಿದಂತೆ ಅಂಚೆ ಇಲಾಖೆಯ ವಿವಿಧ ಸೇವೆಗಳು ಸಾರ್ವಜನಿಕರಿಗೆ ಲಭ್ಯವಿರುತ್ತವೆ.

ರಾಯಚೂರು ಆರ್.ಎಸ್., ಎನ್.ಡಿ. ಎಸ್.ಒಯಲ್ಲಿ ನಿರ್ವಹಣೆಯಲ್ಲಿದ್ದ ಎಲ್ಲಾ ಅಂಚೆ ಉಳಿತಾಯ ಬ್ಯಾಂಕ್ ಖಾತೆಗಳು ಹಾಗೂ ಇತರೆ ಖಾತೆಗಳನ್ನು ರಾಯಚೂರು ಪ್ರಧಾನ ಅಂಚೆ ಕಚೇರಿಗೆ ವರ್ಗಾಯಿಸಲಾಗಿದ್ದು, ಸಂಬಂಧಿಸಿದ ಖಾತೆದಾರರು ತಮ್ಮ ಹಣಕಾಸು ವ್ಯವಹಾರಗಳು, ಪಾಸ್ ಬುಕ್ ನವೀಕರಣ, ಹಣ ಠೇವಣಿ, ಹಣ ಹಿಂಪಡೆಯುವಿಕೆ ಹಾಗೂ ಇತರೆ ಬ್ಯಾಂಕಿಂಗ್ ಸೇವೆಗಳಿಗಾಗಿ ರಾಯಚೂರು ಪ್ರಧಾನ ಅಂಚೆ ಕಚೇರಿಯನ್ನು ಸಂಪರ್ಕಿಸುವಂತೆ ಕೋರಲಾಗಿದೆ. ಅಂಚೆ ಇಲಾಖೆಯು ಸಾರ್ವಜನಿಕರ ಅನುಕೂಲಕ್ಕಾಗಿ ಈ ಬದಲಾವಣೆಯನ್ನು ಜಾರಿಗೆ ತಂದಿದ್ದು, ಎಲ್ಲ ನಾಗರಿಕರು ಹೊಸದಾಗಿ ಕಾರ್ಯಾರಂಭ ಮಾಡಿರುವ ನವೋದಯ ಎಜುಕೇಶನ್ ಟ್ರಸ್ಟ್ ಅಂಚೆ ಕಚೇರಿಯಲ್ಲಿ ಲಭ್ಯವಿರುವ ವಿವಿಧ ಅಂಚೆ ಹಾಗೂ ಹಣಕಾಸು ಸೇವೆಗಳನ್ನು ಸದುಪಯೋಗಪಡಿಸಿಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಾರ್ವಜನಿಕರು ರಾಯಚೂರು ಪ್ರಧಾನ ಅಂಚೆ ಕಚೇರಿ ಅಥ-'ವಾ ನವೋದಯ ಎಜುಕೇಶನ್ ಟ್ರಸ್ಟ್ ಅಂಚೆ ಕಚೇರಿಯನ್ನು ಸಂಪರ್ಕಿಸಬಹುದು ಎಂದು ರಾಯಚೂರು ವಿಭಾಗದ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# "ರಾಯಚೂರು ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಿಸಲು ಕನ್ನಡ ಸೇನೆ ಆಗ್ರಹ"

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆಯನ್ನು ತಕ್ಷಣವೇ ಬರಪೀಡಿತ ಪ್ರದೇಶವೆಂದು ಘೋಷಿಸಿ, ಬೆಳೆ ಹಾನಿಗೊಳಗಾದ ರೈತರಿಗೆ ಪ್ರತಿ ಎಕರೆಗೆ 50 ಸಾವಿರ ರೂ. ಪರಿಹಾರ ನೀಡಬೇಕು ಹಾಗೂ ಜಾನುವಾರುಗಳ ರಕ್ಷಣೆಗೆ ತುರ್ತು ಕ್ರಮ ಕೈಗೊಳ್ಳಬೇಕು ಎಂದು ಕನ್ನಡ ಸೇನೆ ಕರ್ನಾಟಕ ಜಿಲ್ಲಾ ಸಮಿತಿ ಆಗ್ರಹಿಸಿದೆ.**

ಈ ಕುರಿತು ಜಿಲ್ಲಾಧಿಕಾರಿಗಳ ಮೂಲಕ ಕಂದಾಯ ಸಚಿವರಿಗೆ ಮನವಿ ಸಲ್ಲಿಸಿದ ಸಮಿತಿಯು, ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಸಮರ್ಪಕ ಮಳೆಯಾಗದ ಕಾರಣ ಜಿಲ್ಲೆಯಾದ್ಯಂತ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ತಿಳಿಸಿದೆ. ರಾಯಚೂರು, ದೇವದುರ್ಗ, ಅರಕೇರ, ಸಿರವಾರ, ಮಾನವಿ, ಲಿಂಗಸುಗೂರು, ಮಸ್ಕಿ ಹಾಗೂ ಸಿಂಧನೂರು ತಾಲೂಕುಗಳಲ್ಲಿ ಹತ್ತಿ, ಮೆಣಸಿನಕಾಯಿ, ತೊಗರಿ, ಸೂರ್ಯಕಾಂತಿ ಹಾಗೂ ಭತ್ತ ಸೇರಿದಂತೆ



ವಿವಿಧ ಬೆಳೆಗಳನ್ನು ಬಿತ್ತನೆ ಮಾಡಲಾಗಿದ್ದರೂ, ಮಳೆಯ ಕೊರತೆಯಿಂದ ಬೆಳೆಗಳು ಒಣಗಿ ಹೋಗಿವೆ. ಇದರಿಂದ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು, ಜೀವನ ನಿರ್ವಹಣೆ ಕಷ್ಟಕರವಾಗಿದೆ ಎಂದು ಸಮಿತಿಯು ಆತಂಕ ವ್ಯಕ್ತಪಡಿಸಿದೆ.

ಕೃಷಿ ಅವಲಂಬಿತ ಕುಟುಂಬಗಳು ಸಾಲದ ಸುಳಿಯಲ್ಲಿ ಸಿಲುಕಿರುವ ಹಿನ್ನೆಲೆಯಲ್ಲಿ ಸರ್ಕಾರ ತಕ್ಷಣ ಮಧ್ಯಪ್ರವೇಶಿಸಿ ರೈತರ ನೆರವಿಗೆ ಬರಬೇಕು. ಬೆಳೆ ಹಾನಿಗೆ ಸೂಕ್ತ ಪರಿಹಾರ ನೀಡುವುದರ ಜೊತೆಗೆ ರೈತರಿಗೆ ವಿಶೇಷ ಆರ್ಥಿಕ ಪ್ಯಾಕೇಜ್ ಘೋಷಿಸಬೇಕು ಹಾಗೂ ಕೃಷಿ ಸಾಲಗಳನ್ನು ಸಂಪೂರ್ಣ ಮನ್ನಾ ಮಾಡಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ರೈತರ ಮಕ್ಕಳಿಗೆ ವಿಶೇಷ ಆರ್ಥಿಕ ನೆರವು ನೀಡಬೇಕು. ಜಾನುವಾರುಗಳಿಗೆ ಮೇವು ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಗೋಶಾಲೆಗಳನ್ನು ತೆರೆಯಬೇಕು. ಜಾನುವಾರುಗಳ ಆಹಾರ ಮತ್ತು ಸುರಕ್ಷತೆಗೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಮಿತಿ ಆಗ್ರಹಿಸಿದೆ.

ಜಿಲ್ಲೆಯ ಆರ್ಥಿಕ ಬೆನ್ನೆಲುಬಾಗಿರುವ ರೈತರು ಮತ್ತು ಜಾನುವಾರುಗಳನ್ನು ಬರಗಾಲದ ಸಂಕಷ್ಟದಿಂದ ರಕ್ಷಿಸಲು ರಾಜ್ಯ ಸರ್ಕಾರ ತಕ್ಷಣ ಸೂಕ್ತ ಕ್ರಮ ಕೈಗೊಂಡು ರೈತರ ಬದುಕು ಉಳಿಸಬೇಕು ಎಂದು ಕನ್ನಡ ಸೇನೆ ಕರ್ನಾಟಕ ಜಿಲ್ಲಾ ಸಮಿತಿ ಮನವಿ ಮಾಡಿದೆ. ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷರಾದ ಎಂ ಬಸವರಾಜ್, ಮುಖಂಡರಾದ ಮೌನೇಶ್ ಪಿತಗಲ್, ನಾಗಪ್ಪ ಮೌನೇಶ್ ಬುಡಗಿ, ಜಗದೀಶ್ ತಾಯಪ್ಪ ಮುಂತಾದವರು ಉಪಸ್ಥಿತರಿದ್ದರು ಇದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101